ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಇತ್ತೀಚೆಗೆ ಇಂಡೋನೇಷಿಯಾದ ಜಕಾರ್ತಾ–ಪಾಲೆಮ್‌ಬಂಗ್ ನಗರಗಳಲ್ಲಿ ಜರುಗಿದ 18ನೇ ಏಷಿಯನ್ ಗೇಮ್ ಕ್ರೀಡಾಕೂಟದಲ್ಲಿ ಪದಕ ಗೆದ್ದು ಸಂಭ್ರಮಿಸುತ್ತಿರುವ ಭಾರತೀಯ ಕ್ರೀಡಾಳುಗಳು. ಈ ಕ್ರೀಡಾಕೂಟದಲ್ಲಿ 15 ಚಿನ್ನದ ಪದಕಗಳು ಸೇರಿದಂತೆ ಒಟ್ಟು 69 ಪದಕಗಳನ್ನು ಭಾರತೀಯ ಕ್ರೀಡಾಳುಗಳು ಗೆದ್ದಿದ್ದು 1951 ರಿಂದ 4 ವರ್ಷಗಳಿಗೊಮ್ಮೆ ನಡೆಯುವ ಏಷಿಯನ್ ಗೇಮ್ಸ್‌ನಲ್ಲಿ ಇದುವರೆಗಿನ ಅತ್ಯಧಿಕ ಸಂಖ್ಯೆಯಾಗಿದೆ. ಪದಕ ಪಟ್ಟಿಯಲ್ಲಿ ಭಾರತ 8ನೇ ಸ್ಥಾನದಲ್ಲಿದೆ.

ಸಂಪುಟ : 40 ಸಂಚಿಕೆ : 3 ವಿಳಂಬಿ – ಭಾದ್ರಪದ ಕಲಿಯುಗಾಬ್ದ 5120 15-09-2018 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಮಾವೋವಾದಿಗಳ ಬಣ್ಣಬಣ್ಣದ ಮುಖವಾಡಗಳು

# ನಾಡಿನಲ್ಲಿಯೂ ಬೇರು ಬಿಟ್ಟಿದ್ದಾರೆ ಅರ್ಬನ್ ನಕ್ಸಲೀಯರು

ಅರ್ಬನ್ ಮಾವೋವಾದಿಗಳ ಕುರಿತು ಕೇಂದ್ರ ಸರ್ಕಾರದ ಗೃಹ ಇಲಾಖೆ 2013ರಲ್ಲಿ ಸರ್ವೋಚ್ಚ ನ್ಯಾಯಾಲಕ್ಕೆ ಅಫಿಡವಿಟ್ ಒಂದನ್ನು ಸಲ್ಲಿಸಿತ್ತು. ಅದರಲ್ಲಿ ಹೇಳಿದ್ದು – 'ಮಾನವ ಹಕ್ಕು ಹೋರಾಟದ ಸರ್ಕಾರೇತರ ಸಂಘಟನೆಗಳ ಮುಖವಾಡ ಹೊತ್ತ ಸಿಪಿಐ(ಮಾವೋವಾದಿ)ನ ಮುಂಚೂಣಿ ಸಂಘಟನೆಗಳು ಮಾವೋವಾದಿ ಆಂದೋಲನವನ್ನು ಜೀವಂತವಾಗಿರಿಸಿವೆ ಮತ್ತು ಅವರು ಸಶಸ್ತ್ರ ಕಾರ್ಯಕರ್ತರ ತಂಡಗಳಿಗಿಂತಲೂ ಅಪಾಯಕಾರಿಯಾಗಿವೆ. ಇಂತಹ ಸಂಘಟನೆಗಳನ್ನು ಸಾಮಾನ್ಯವಾಗಿ ಪಕ್ಷದ ಸಿದ್ಧಾಂತಕ್ಕೆ ನಿಷ್ಠರಾಗಿರುವ ಶಿಕ್ಷಣ ಕ್ಷೇತ್ರದಲ್ಲಿರುವವರು ಮತ್ತು ಇತರ ಕಾರ್ಯಕರ್ತರು ನಡೆಸುತ್ತಾರೆ. ಅಂತಹ ಸಂಘಟನೆಗಳು ಮೇಲ್ನೋಟಕ್ಕೆ ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳನ್ನು ಬಳಸಿಕೊಳ್ಳುತ್ತಾರೆ. ಹಾಗೆಯೇ ದೇಶದ ಕಾನೂನು ಪ್ರಕ್ರಿಯೆಗಳನ್ನೇ ಉಪಯೋಗಿಸಿಕೊಂಡು ವ್ಯವಸ್ಥೆಯನ್ನೇ ಹಾಳುಮಾಡಲು ಮತ್ತು ಅದನ್ನು ದುರ್ಬಲಗೊಳಿಸಲು ಬಳಸಿಕೊಳ್ಳುವ ಕೌಶಲ ಅವರಲ್ಲಿದೆ. ತಮ್ಮ 'ಕ್ರಾಂತಿ' ಯೋಜನೆಯನ್ನು ಬೆಳೆಸುವ ಸಲುವಾಗಿ ಅವರು ಅಪಪ್ರಚಾರದ ಮೂಲಕ ರಾಜ್ಯ ವ್ಯವಸ್ಥೆಯ ಸಂಸ್ಥೆಗಳನ್ನು ಕೆಡಿಸಲು ಯತ್ನಿಸುತ್ತಾರೆ. ಮಹಾನಗರ ಮತ್ತು ಪಟ್ಟಣಗಳಲ್ಲಿನ ಇಂತಹ ಮಾವೋವಾದಿ ಮುಂಚೂಣಿ ಸಂಘಟನೆಗಳು ಭೂಗತರಾಗಿ ಕೆಲಸ ಮಾಡುವ ಕಾರ್ಯಕರ್ತರನ್ನು ನೇಮಕಾತಿ ಮಾಡುವ ಪ್ರಾಥಮಿಕ ಮೂಲಗಳಾಗಿವೆ ಮತ್ತು ಅಸಾಂವಿಧಾನಿಕ ಹಾಗೂ ಹಿಂಸಾತ್ಮಕ ಮಾವೋವಾದಿ ವಿಚಾರವನ್ನು ದುರ್ಬಲ ವರ್ಗದ ಜನರ ನಡುವೆ ಹಬ್ಬಿಸುವ ಕೆಲಸ ಮಾಡುತ್ತಿವೆ.'

ಅಂದಿನ ಯುಪಿಎ ಸರ್ಕಾರ ಒಟ್ಟು 128 ಇಂತಹ ಮುಂಚೂಣಿ ಅರ್ಬನ್ ಮಾವೋವಾದಿ ಸಂಘಟನೆಗಳನ್ನು ಗುರುತಿಸಿ ಅವುಗಳ ಮೇಲೆ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು. ಅಂದರೆ ಅರ್ಬನ್ ನಕ್ಸಲಿಯುರ ವಿಷಯ ಇತ್ತೀಚೆಗೆ ಚರ್ಚೆಗೆ ಬರುತ್ತಿರುವುದಲ್ಲ. ಮಾವೋವಾದದ ಕುರಿತು ಸಹಾನುಭೂತಿ ಉಳ್ಳವರಷ್ಟೇ ಅಲ್ಲ ಮಾವೋವಾದಿ ಚಳುವಳಿಯನ್ನು ಜೀವಂತವಾಗಿರಿಸುವ, ಅದರ ಪ್ರಚಾರ, ಪೋಷಣೆಯ ಹೊಣೆ ಹೊತ್ತು ನಗರಗಳಲ್ಲಿ ಸಕ್ರಿಯರಾಗಿರುವ ಅರ್ಬನ್ ನಕ್ಸಲೀಯುರು ದಶಕಗಳ ಹಿಂದೆಯೇ ವಿಶ್ವವಿದ್ಯಾಲಯುಗಳಲ್ಲಿ, ಮಾಧ್ಯಮಗಳಲ್ಲಿ, ಸರ್ಕಾರದ ಇಲಾಖೆಗಳಲ್ಲಿ, ವಕೀಲರಾಗಿ, ವಿಧವಿಧದ ಎನ್‌ಜಿಒಗಳನ್ನು ಕಟ್ಟಿಕೊಂಡು ಆಳವಾಗಿ ಬೇರುಬಿಟ್ಟಿದ್ದಾರೆ.

ಯಾರಿವರು? ಅರ್ಬನ್ ನಕ್ಸಲೀಯರು. ಈ ಅರ್ಬನ್ ನಕ್ಸಲೀಯರನ್ನು ಸ್ಥೂಲವಾಗಿ ವ್ಯಾಖ್ಯಾನಿಸುವುದಾದರೆ – ಮಾವೋವಾದಿ, ನಕ್ಸಲ್ ಮೊದಲಾದ ಎಡಪಂಥೀಯ ಹಿಂಸಾತ್ಮಕ ವರ್ಗಸಂಘರ್ಷದ ಕಡೆ ಒಲವುಳ್ಳ, ನಗರಗಳಲ್ಲಿ ವಾಸಿಸುತ್ತ ಈ ವಿಚಾರಧಾರೆಯ ಕಾರ್ಯಕರ್ತರಾಗಿ ಕೆಲಸ ಮಾಡುವ ಹಾಗೂ ಕಾಡಿನಲ್ಲಿ ನೆಲೆಸಿರುವ ಮಾವೋವಾದಿಗಳಿಗೆ ನಗರಗಳಿಂದ ಬೆಂಬಲ, ಸಹಾನುಭೂತಿ, ನೇಮಕಾತಿ ಮತ್ತು ಪೋಷಣೆ ದೊರಕಿಸಲು ಕೆಲಸ ಮಾಡುವವರನ್ನು ಅರ್ಬನ್ ನಕ್ಸಲರು ಎಂದು ಕರೆಯಬಹುದು.

2014ರಲ್ಲಿ ಸಿಪಿಐ(ಮಾವೋವಾದಿ) ಕೇಂದ್ರ ಸಮಿತಿಯ ನಿರ್ಣಯದಲ್ಲಿ "ದೇಶದಾದ್ಯಂತ ಪೀಪಲ್ಸ್ ವಾರ್‌ನ್ನು ಬೆಳೆಸಿ ತೀವ್ರಗೊಳಿಸುವುದು. ಪೀಪಲ್ಸ್ ಲಿಬರೇಶನ್ ಆರ್ಮಿ ನಿರ್ಮಿಸುವ ಮೂಲಭೂತ ತತ್ವವನ್ನು ಅನುಸರಿಸಿ ಸಶಸ್ತ್ರ ಕ್ರಾಂತಿಯನ್ನು ನಡೆಸುವುದು,.... ಇತರೆ ತತ್‌ಕ್ಷಣದ ಕಾರ್ಯ – ನಗರಗಳಲ್ಲಿ ಕಾರ್ಮಿಕ ವರ್ಗಗಳ ಕಡೆ ವಿಶೇಷ ಗಮನಹರಿಸಿ ವರ್ಗ ಸಂಘರ್ಷ ಬೆಳಸುವುದು, ಕಾರಣ ಇಂದಿನ ಗ್ಲೋಬಲೈಶೇನ್ ಮತ್ತು ಲಿಬರಲೈಸೇಶನ್ ನೀತಿಗಳಿಂದಾಗಿ ನಗರ ಪ್ರದೇಶಗಳು ಸಾಮ್ರಾಜ್ಯಶಾಹಿ,




ಬಂಡವಾಳಶಾಹಿಯ ವಿರುದ್ಧ ಹೋರಾಟದಲ್ಲಿ ಪ್ರಮುಖ ಕೇಂದ್ರಗಳಾಗುವ ಸಾಮರ್ಥ್ಯ ಹೊಂದಿವೆ' ಎಂದು ಹೇಳಿದೆ.

ಹಾಗೆಯೇ 2001ರ ಅರ್ಬನ್ ಪರ್‌ಸ್ಪೆಕ್ಟಿವ್ ಎನ್ನುವ ದಸ್ತಾವೇಜಿನಲ್ಲಿ ನಗರ ಪ್ರದೇಶಗಳಲ್ಲಿ ಮಾವೋವಾದವನ್ನು ಬೆಳೆಸಬೇಕಾದ ಪ್ರಾಮುಖ್ಯತೆ, ಅನುಸರಿಸಬೇಕಾದ ಮಾರ್ಗಗಳ ವಿಸ್ತ್ರತ ವರದಿ ಇದೆ. ಈ ಕುರಿತು ನಕ್ಸಲ್ ಸಹಾನುಭೂತಿಗಾರ ಗೋವಿಂದನ್ ಕುಟ್ಟಿ ಎನ್ನುವವರು ಬರೆದ ದಾಖಲೆಯಲ್ಲಿ ನಗರಗಳಲ್ಲಿ ಸಶಸ್ತ್ರ ಸಂಘರ್ಷ, ವೈಟ್ ಕಾಲರ್ ಕಾರ್ಮಿಕ ಸಂಘಟನೆಗಳಲ್ಲಿ ನುಗ್ಗುವುದು, ಸೈನ್ಯ ಮತ್ತು ಸರ್ಕಾರದ ನೌಕರಿಗಳಲ್ಲಿ ಒಳನುಸುಳುವುದು ಮೊದಲಾದವುಗಳ ಉಲ್ಲೇಖವಿದೆ. ನಗರಗಳ ಮಾವೋವಾದ ಬಲಪಡಿಸಬೇಕು, ಅದರಲ್ಲಿ ಸೆಕ್ಯುಲರ್ ಶಕ್ತಿಗಳು, ದೌರ್ಜನ್ಯಕ್ಕೊಳಗಾದ ಮತೀಯ ಅಲ್ಪಸಂಖ್ಯಾತ ಶಕ್ತಿಗಳು ಸೇರಿರಬೇಕು ಇತ್ಯಾದಿಯಾಗಿ ಕಾರ್ಯ ಪದ್ಧತಿಯನ್ನು ಅದರಲ್ಲಿ ವಿವರಿಸಲಾಗಿದೆ.

3 ನೇ ಪುಟಕ್ಕೆ ➤➤



**ಕೆಲವು ತಿಂಗಳ ಹಿಂದೆ ಮಹಾರಾಷ್ಟ್ರದ ಬಿಮಾ–ಕೊರೆಗಾಂವ್‌ನಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ಪುಣೆಯ ಪೋಲಿಸರು ದೇಶದ ವಿವಿಧ ಕಡೆ ತನಿಖಾದಾಳಿ ನಡೆಸಿ ಐದು ಜನ ನಕ್ಸಲ್ ಸಹಾನುಭೂತಿಗಾರರನ್ನು ಬಂಧಿಸಿದರು. ನಂತರ ಅವರನ್ನು ನ್ಯಾಯಾಲಯ ಆದೇಶದಂತೆ ಗೃಹಬಂಧನಕ್ಕೊಳಪಡಿಸಲಾಯಿತು. ತಥಾಕಥಿತ ಈ ಮಾನವ ಹಕ್ಕು ಹೋರಾಟಗಾರರ ಬಂಧನದ ಘಟನೆ ನಡೆದದ್ದೇ ತಡ ಒಂದು ವರ್ಗದಿಂದ ದೊಡ್ಡ ಕೂಗು ಆರಂಭವಾಯಿತು. ಇದು ಪ್ರಜಾಪ್ರಭುತ್ವದ ಕಗ್ಗೊಲೆ ಎನ್ನಲಾಯಿತು, ತುರ್ತು ಪರಿಸ್ಥಿತಿಗಿಂತಲೂ ಕರಾಳ ಎಂದೇ ಘೋಷಿಸಲಾಯಿತು, ಅಭಿವ್ಯಕ್ತಿ ಸ್ವಾತಂತ್ರ್ಯ ಹತ್ತಿಕ್ಕಲಾಗುತ್ತಿದೆ ಎಂದು ಪ್ರದರ್ಶನಗಳು, ಸೆಮಿನಾರುಗಳು ಆರಂಭವಾದವು, ಪತ್ರಿಕೆಗಳಲ್ಲಿ ಅವರ ಪರ ಪುಟಗಟ್ಟಲೇ ಲೇಖನಗಳು ಬಂದವು, ಹೇಳಿಕೆಗಳು ಪುಂಖಾನುಪುಂಖವಾಗಿ ಹರಿದವು, ಪಿಐಎಲ್ ಸಲ್ಲಿಸಲು ನ್ಯಾಯಾಲಯಗಳತ್ತ ಓಡಲಾಯಿತು. ಇದು ಮಾನವ ಹಕ್ಕು ಹೋರಾಟದ ಮುಖವಾಡ ಹೊತ್ತ ಅರ್ಬನ್ ನಕ್ಸಲೀಯರ ಸಾಮಾನ್ಯ ಕಾರ್ಯವೈಖರಿ.**

**ಬಿಮಾ–ಕೊರೆಗಾಂವ್‌ನಲ್ಲಿ 2018ರ ಜನವರಿಯಲ್ಲಿ ನಡೆದ ಹಿಂಸಾಚಾರ ಪ್ರಕರಣವನ್ನು ತನಿಖೆ ಮಾಡುತ್ತಿದ್ದ ಪುಣೆ ಪೊಲೀಸರಿಗೆ ಸಿಕ್ಕಿದ ಮಾಹಿತಿಗಳು ಗಂಭೀರವಾದವು. ಬಂಧನಕ್ಕೊಳಗಾಗಿದ್ದ ನಕ್ಸಲ್‌ವಾದಿ, ದೆಹಲಿ ವಿಶ್ವವಿದ್ಯಾಲದ ಉಪಪ್ರಾಧ್ಯಾಪಕ ಸಾಯಿಬಾಬಾ ಅವರಿಂದ ವಶಪಡಿಸಿಕೊಳ್ಳಲಾದ ಕಡತಗಳಲ್ಲಿನ ಮಾಹಿತಿಯ ಪ್ರಕಾರ ದೇಶದಲ್ಲಿ ವ್ಯಾಪಕ ಅಶಾಂತಿ, ಅರಾಜಕತೆಯನ್ನೆಬ್ಬಿಸಲು ಮಾವೋವಾದಿಗಳು ಭಾರಿ ಪ್ರಮಾಣದ ವ್ಯವಸ್ಥಿತ ಯೋಜನೆಯನ್ನೇ ರೂಪಿಸಿದ್ದರು. ಆ ಯೋಜನೆಯ ಪ್ರಕಾರ 2025ರ ಹೊತ್ತಿಗೆ ದೇಶದಲ್ಲಿ ಸಶಸ್ತ್ರ ಕ್ರಾಂತಿಯೆಸಗಿ, ರಾಜಕೀಯ ಅಧಿಕಾರವನ್ನು ಕೈಗೆ ತೆಗೆದುಕೊಳ್ಳಲು ಸಂಚು ಹೂಡಿರುವ ಅವರು ಯೋಜನೆಗೆ ಪೂರ್ವತಯಾರಿಯಾಗಿ ದೇಶಾದ್ಯಂತ ದಲಿತ ಚಳವಳಿಗಳನ್ನು ಬಳಸಿಕೊಂಡು ಸಾಮಾಜಿಕ ಅಶಾಂತಿ ಉಂಟುಮಾಡುವ ಹುನ್ನಾರವೆಸಗಿದ್ದರು. ಅದರ ಆರಂಭ ಭೀಮಾ ಕೋರೆಗಾಂವ್. ಈ ಜಾಡನ್ನು ಹಿಡಿದಿ ನಡೆದ ತನಿಖಾ ದಾಳಿಯಿಂದ ಇನ್ನೊಂದಿಷ್ಟು ಅರ್ಬನ್ ನಕ್ಸಲರ ಕೊಂಡಿಗಳು ಹೊರಬಂದವು.**

**ವಾಸ್ತವ ಸಂಗತಿ ಎಂದರೆ ಬಂಧನಕ್ಕೊಳಗಾದ – ವರವರ ರಾವ್, ಸುಧಾ ಭಾರದ್ವಾಜ, ವರ್ನನ್ ಗೊನ್ಸಾಲ್ವೆಸ್, ಅರುಣ ಫೆರೇರಿಯಾ ಮತ್ತು ಗೌತಮ ನವ್‌ಲಾಖ ಈ ಐವರು ಹಿಂದೆ ಅನೇಕ ಬಾರಿ ಒಂದಲ್ಲ ಒಂದು ಪ್ರಕರಣಗಳಲ್ಲಿ ಬಂಧನಕ್ಕೊಳಗಾದವರೇ. ಅವರ ನಕ್ಸಲ್ ನಂಟು ಹಿಂದೆಯೇ ಸಾಬೀತಾಗಿತ್ತು. ಕೇಂದ್ರ ಗೃಹ ಇಲಾಖೆಗೆ ಸಲ್ಲಿಸಿದ ವರದಿಯಲ್ಲಿ ಪುಣೆ ಪೋಲಿಸರು ಅವರು ನಕ್ಸಲೀಯರಿಗೆ ಆರ್ಥಿಕ ಬೆಂಬಲ ಮತ್ತು ಸರಬರಾಜು ಸಹಕಾರ ನೀಡುತ್ತಿದ್ದರು. ಅಲ್ಲದೇ ಭಯೋತ್ಪಾದಕ ಗುಂಪುಗಳೊಂದಿಗೆ ಮೈತ್ರಿಯನ್ನು ಕುದುರಿಸಲೂ ಇವರು ಪ್ರಯತ್ನ ಮಾಡುತ್ತಿದ್ದರು ಎಂದು ಹೇಳಿದೆ. ಇವರು ನಿಷೇಧಿತ ಭಯೋತ್ಪಾದಕ ಸಂಘಟನೆ ಸಿಪಿಐ(ಮಾವೋವಾದಿ)ನ ಭಾಗವಾದ್ದಾರೆ ಎಂದು ಕಂಡು ಬಂದಿದೆ, ಅವರ ವಿರುದ್ಧ ಗಂಭೀರ ಕ್ರಿಮಿನಲ್ ಅಪರಾಧದ ಆರೋಪಗಳು ಬಂದಿವೆ. ಅವರು ದೊಡ್ಡ ಪ್ರಮಾಣದ ಹಿಂಸಾಚಾರಕ್ಕೆ ಯೋಜನೆ ಮತ್ತು ತಯಾರಿ ನಡೆಸುತ್ತಿದ್ದರು ಎಂದು ಪುಣೆ ಪೋಲಿಸರು ಆರೋಪಿಸಿದ್ದಾರೆ.**

**ಬಂಧನಕ್ಕೊಳಗಾದ ಮಾನವ ಹಕ್ಕು ಹೋರಾಟದ ಮುಖವಾಡ ಹೊತ್ತ ಇವರುಗಳ ಹಿನ್ನೆಲೆಯನ್ನು ಒಮ್ಮೆ ಗಮನಿಸುವುದು ಒಳ್ಳೆಯದು. ವಿಪ್ಲವ ರಚಯಿತಾಲಾ ಸಂಘಂ (ಕ್ರಾಂತಿಕಾರಿ ಬರಹಗಾರರ ಸಂಘ) ಎನ್ನುವ ಸಂಘವನ್ನು ಕಟ್ಟಿಕೊಂಡಿರುವ ಕವಿ, ಚಿಂತಕ, ಬರಹಗಾರ ಇತ್ಯಾದಿಯಾಗಿ ಹೆಸರು ಪಡೆದಿರುವ ತೆಲಂಗಾಣದ ವರವರ ರಾವ್ ಹಿಂದೆ ಅನೇಕ ಬಾರಿ ಬರಹಗಳ ಮೂಲಕ ನಕ್ಸಲ್ ವಿಚಾರವನ್ನು ಪ್ರಚಾರ ಮಾಡಿದ್ದಕ್ಕಾಗಿ ಬಂಧನಕ್ಕೊಳಗಾಗಿದ್ದ. 200 ಜನ ರೆಡ್ ಗಾರ್ಡ್‌ಗಳಿರುವ ಪೀಪಲ್ಸ್ ಆರ್ಮಿಯ ಬೇಸ್ ಏರಯಾಗಳ ನಿರ್ಮಾಣ ಮಾಡಬೇಕೆಂದು ಆತ ಪ್ರತಿಪಾದಿಸುತ್ತಿದ್ದ. ವಕೀಲೆ ಸುಧಾ ಭಾರದ್ವಾಜ್ ನಕ್ಸಲರ ಪರವಾಗಿ ನ್ಯಾಯಾಯಲದಲ್ಲಿ ವಾದಿಸುತ್ತಿದ್ದವಳು. ಮಾವೋವಾದಿಗಳಿಗೆ ಕೋರಿಯರ್ ಕೆಲಸ ಮಾಡುತ್ತಿದ್ದ ಅರುನ್ ಫೆರೆರಿಯಾ 2007ರಲ್ಲಿ ಬಂಧನಕ್ಕೊಳಗಾಗಿದ್ದ. ವರ್ನನ್ ಗೊನ್ಸಾಲ್ವೆಸ್ ಕೂಡ 2007ರಲ್ಲಿ ಮಾವೋವಾದಿಗಳ ಸಂಪರ್ಕಕ್ಕಾಗಿ ಬಂಧನಕ್ಕೊಳಗಾಗಿದ್ದ. ಎಕಾನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿಯ ಕನ್ಸಲ್ಟಿಂಗ್ ಎಡಿಟರ್ ಸಹ ಆಗಿರುವ ಗೌತಮ್ ನವ್‌ಲಾಖ ದಂಡಕಾರಣ್ಯದ ಮಾವೋವಾದಿಗಳೊಂದಿಗೆ ಕೆಲವು ಕಾಲ ಇದ್ದವ, ಉಗ್ರ ಬುರ್‌ಹಾನ್ ವಾನಿ ಬಗ್ಗೆ, ಕಾಶ್ಮೀರದ ಉಗ್ರರ ಬಗ್ಗೆ ಸಹಾನಭೂತಿಯ ಲೇಖನಗಳನ್ನು ಬರೆದವ.**

# ಹೈದ್ರಾಬಾದ್-ಕರ್ನಾಟಕ ಮುಕ್ತಿದಿನ (ಸೆಪ್ಟೆಂಬರ್ 17, 1948)

ಸಂಸ್ಮರಣೆ

1947ರ ನಂತರ ಮತ್ತು 1948ರ ಮೊದಲಲ್ಲಿ ದೇಶದ ಮುಂದಿದ್ದ ಅತ್ಯಂತ ಗುರುತರ ಸವಾಲೆಂದರೆ ದೇಶದಲ್ಲೆಲ್ಲ ಹರಡಿದ್ದ 564 ಸ್ವತಂತ್ರ ಆಳ್ವಿಕೆಯ ಸಂಸ್ಥಾನಗಳನ್ನು ಭಾರತದೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆ. ಅಂದಿಗೆ ವಿಶೇಷ ಪರಿಸ್ಥಿತಿಗಳಿಂದ ವಿಲೀನ ಪ್ರಕ್ರಿಯೆಯಿಂದ ಹೊರಗುಳಿದಿದ್ದು 3 ಪ್ರದೇಶಗಳು: ಜಮ್ಮು-ಕಾಶ್ಮೀರ, ಜುನಾಗಢ ಮತ್ತು ಹೈದರಾಬಾದ್.

ಜಮ್ಮು-ಕಾಶ್ಮೀರದ ವಿಷಯವನ್ನು ಪಂಡಿತ್ ನೆಹರೂ ತಮ್ಮ ವಯುಕ್ತಿಕ ಪ್ರತಿಷ್ಠೆಯ ಸಂಗತಿಯಾಗಿಸಿಕೊಂಡು ಇತ್ತ ಸಮಸ್ಯೆಯನ್ನು ಬಗೆಹರಿಸಲೂ ತಿಳಿಯದೆ ಬೇರೆಯವರಿಗೆ ವಹಿಸುವ ಮನಸ್ಸೂ ಇಲ್ಲದೇ ಮಾಯದ ವ್ರಣವಾಗಿಸಿದ ಸಂಗತಿ ಸರ್ವವಿದಿತ.

ಸೌರಾಷ್ಟ್ರದ ಜುನಾಗಢದ ದಿವಾನನ ಪಾಕಿಸ್ತಾನ ಪ್ರೇಮ ಮತ್ತು ರಾಜ್ಯದ 90 ಪ್ರತಿಶತ ಹಿಂದು ಜನತೆಯ ಭಾರತದ ಪ್ರೀತಿಯ ಕುರಿತು ಸ್ಪಷ್ಟ ತಿಳಿವಳಿಕೆ ಹೊಂದಿದ್ದ ಸರ್ದಾರ್ ಪಟೇಲರು 1947 ಅಕ್ಟೋಬರ್-ನವೆಂಬರ್ ಸಮಯದಲ್ಲಿ ಭಾರತೀಯ ಸೇನೆಯನ್ನು ಸಂಸ್ಥಾನದ ಬಾಗಿಲಿಗೇ ಕಳಿಸಿದರು. ಆದರೆ ಸೇನೆಗೇಕೆ ಕಷ್ಟ ಎಂದು ದಿವಾನ ಗಂಟುಮೂಟೆ ಕಟ್ಟಿ ಹಿಂದಿನ ರಾತ್ರಿಯೇ ಪಾಕಿಸ್ತಾನಕ್ಕೆ ಓಡಿಹೋಗಿದ್ದ. 1948ರ ಫೆಬ್ರುವರಿ 20 ರಂದು ನಡೆದ ಜನಾಭಿಪ್ರಾಯ ಸಂಗ್ರಹದಲ್ಲಿ ಅಭೂತಪೂರ್ವ ಬಹುಮತದೊಂದಿಗೆ ಜುನಾಗಢದ ಜನತೆ ಭಾರತದೊಡನೆ ವಿಲೀನವನ್ನು ಅನುಮೋದಿಸಿತು. ನಂತರ ಉಳಿದದ್ದೇ ಹೈದರಾಬಾದಿನ ಪ್ರಶ್ನೆ.

ಆ ಹೊತ್ತಿಗೆ ಹೈದರಾಬಾದ್ 82,313 ಚದರಮೈಲಿ ವಿಸ್ತಾರದೊಂದಿಗೆ ದೇಶದಲ್ಲೇ ಅತಿದೊಡ್ಡ ಹಾಗು ಶ್ರೀಮಂತ ಸಂಸ್ಥಾನವಾಗಿತ್ತು. ಸ್ವಂತ ಸೇನೆ, ರೇಡಿಯೋ ಮತ್ತು ನಾಣ್ಯ ಚಲಾವಣೆ ಪದ್ಧತಿ, ಪೋಸ್ಟ್ ಸೇವೆ, ಖಾಸಗಿ ರಕ್ಷಕ ಪಡೆಗಳಂತಹ ವ್ಯವಸ್ಥೆಯನ್ನು ಹೊಂದಿದ್ದ ಏಕಮಾತ್ರ ರಾಜ್ಯವಾಗಿತ್ತು. ಭಾರತದ ಇತರೇ ಸಂಸ್ಥಾನಗಳ ರಾಜರು ಇಂಗ್ಲೆಂಡಿನ ರಾಜನ ಅಧೀನ ಸಾಮಂತರಂತಿದ್ದರೆ, ಹೈದರಾಬಾದ್ ನಿಜಾಮ ಮೀರ್ ಓಸ್ಮಾನ್ ಅಲಿಖಾನನ ಅಂತಸ್ತು ಇಂಗ್ಲೆಂಡಿನ ಸಾಮ್ರಾಟನ ಮಿತ್ರನದಾಗಿತ್ತು. ಹಾಗಾಗಿಯೇ ಬ್ರಿಟಿಷರಿಗೆ ಮಿಕ್ಕ ಸಂಸ್ಥಾನಾಧಿಪತಿಗಳು His Highness






ಗಳಾದರೆ ನವಾಬ ಮಾತ್ರ His Exalted Highness ಆಗಿದ್ದ. ಬ್ರಿಟಿಷ್ ಸಾಮ್ರಾಜ್ಯದ ನಂಬಿಕಸ್ಥ ಸ್ನೇಹಿತ (Faithful Ally) ಎಂಬ ಅಭಿದಾನ ಹೊಂದಿದ್ದ ಕಾರಣಕ್ಕೆ ಭಾರತಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಕೊನೆಯ ವೈಸರಾಯ್ ಲಾರ್ಡ್ ಮೌಂಟ್ ಬೆಟನ್ನನಿಗೆ ನವಾಬನ ಹಿತಾಸಕ್ತಿಯ ವಿಷಯದಲ್ಲಿ ವಿಶೇಷ ಕಾಳಜಿಯಿತ್ತು.

ವಿಲೀನಕ್ಕಾಗಿ ನಿಜಾಮನು ಸರಳಮಾರ್ಗದಲ್ಲಿ ಒಪ್ಪುವ ಸಂಭವ ಕಡಿಮೆಯೇ ಎಂದು ಮೊದಲೇ ಊಹಿಸಿದ್ದ ಪಟೇಲರು ಮೌಂಟ್ ಬ್ಯಾಟನ್ನನ ಸಂತುಷ್ಟಿಗಾಗಿ ಹೈದ್ರಾಬಾದ್ ಸರ್ಕಾರದೊಂದಿಗೆ 29-11-1947 ರಂದು "ಯಥಾಸ್ಥಿತಿ ಒಪ್ಪಂದ"ಕ್ಕೆ ಸಮ್ಮತಿಸಿದರು. ಒಪ್ಪಂದದ ಪ್ರಕಾರ, ನಿಜಾಮನ ಆಂತರಿಕ ಆಡಳಿತದ ವಿಷಯದಲ್ಲಿ ಹೊರತಾಗಿ ಆತನ ವಿದೇಶವಾರ್ತೆಯನ್ನು ಮಾತ್ರ ಭಾರತ ಸರ್ಕಾರವು ವಹಿಸಿಕೊಳ್ಳುವದೆಂದೂ ಬದಲಿಗೆ ನಿಜಾಮನು ಪಾಕಿಸ್ತಾನವನ್ನು ಸೇರುವದಿಲ್ಲ ಎಂಬ ಆಶ್ವಾಸನೆಯನ್ನೂ ಪಡೆಯಲಾಯಿತು. ಒಪ್ಪಂದದ ಭಾಗವಾಗಿಯೇ ಭಾರತ ಸರ್ಕಾರದ ಏಜಂಟ್ ಜನರಲ್‌ರಾಗಿ ಕೆ.ಎಂ.ಮುನ್ಷಿಯವರು ಪಟೇಲರಿಂದ ನಿಯುಕ್ತಿಗೊಂಡು ಹೈದರಾಬಾದಿಗೆ ಬಂದಿಳಿದರು.

ಪಟೇಲರ ನಿರೀಕ್ಷೆಯಂತೆಯೇ ಯಥಾಸ್ಥಿತಿ ಒಪ್ಪಂದದ ಕರಾರುಗಳನ್ನು ನಿಜಾಮ್ ಸರ್ಕಾರ ನಿರಂತರ ಉಲ್ಲಂಘಿಸುತ್ತಲೇ ಬಂದಿತು. ವಿದೇಶಗಳಿಂದ ಶಸ್ತ್ರಾಸ್ತ್ರಗಳ ಸಂಗ್ರಹಣೆ, ಆಂತರಿಕ ಸೇನೆಯನ್ನು ಬಲಪಡಿಸುವದು, ಕರಾಚಿಯಲ್ಲಿ ತನ್ನ ಸಂಪರ್ಕಾಧಿಕಾರಿಯನ್ನು ಸ್ಥಾಪಿಸುವದು, ಭಾರತದ ನಾಣ್ಯಗಳನ್ನು ತನ್ನ ರಾಜ್ಯದಲ್ಲಿ ಪ್ರತಿಬಂಧಿಸುವಂತಹ ಅನೇಕ ಭಾರತ ವಿರೋಧಿ ಚಿತಾವಣೆಗಳು ಹೆಚ್ಚುತ್ತಲೇ ಇದ್ದವು. ಭಾರತದ ವಿರುದ್ಧ ಯುದ್ಧಹೂಡಲು ಪಾಕಿಸ್ತಾನಕ್ಕೆ 20 ಕೋಟಿ ರೂಪಾಯಿಗಳ ಸಹಾಯವನ್ನೂ ನಿಜಾಮ್ ನೀಡಿದ್ದ. ನಿಜಾಮನ ಮಹತ್ವಾಕಾಂಕ್ಷೆಗಳಿಗೆ ನೀರೆರೆಯಲು ಮೊಹಮ್ಮದ್ ಅಲಿ ಜಿನ್ನಾನ ಸಲಹೆಯ ಮೇರೆಗೆ ಹೈದರಾಬಾದಿನ ಪ್ರಧಾನಿಯಾಗಿ ನಿಯುಕ್ತಿಗೊಂಡಿದ್ದ ಲಯಿಕ್ ಅಲಿ ಮತ್ತು ರಜಾಕಾರ್‌ರೆಂಬ ಮುಸ್ಲಿಂ ಖಾಸಗಿ ರಕ್ಷಣಾಪಡೆ ಹಾಗೂ ಇತ್ತೆಹಾದ್-ಉಲ್-ಮುಸಲ್ಮಿನ್ (ಈಗಿನ ಪ್ರಾದೇಶಿಕ ಪಕ್ಷ AIMIMನ ಮೂಲರೂಪ) ಎಂಬ ಸಂಘಟನೆಯ ಮುಖ್ಯಸ್ಥ ಕಾಸಿಂ ರಜ್ವಿಯ ಬೆಂಬಲವೂ ಇತ್ತು. ಇವರಿಬ್ಬರಿಂದ ಪ್ರೇರಿತನಾದ ನಿಜಾಮ್ ಹೈದರಾಬಾದನ್ನು ಪಾಕಿಸ್ತಾನದೊಂದಿಗೆ ವಿಲೀನಗೊಳಿಸುವ ಕನಸುಕಾಣತೊಡಗಿದ್ದ.

ಪಟೇಲರೊಡನೆ ನಡೆದ ಭೇಟಿಯ ಸಂದರ್ಭದಲ್ಲಿ "ಕಟ್ಟಕಡೆಯ ಮುಸ್ಲಿಮನಿರುವವರೆಗೆ ಭಾರತದ ಒಕ್ಕೂಟದ ವಿರುದ್ಧ ನಾವು ಯುದ್ಧ ಮಾಡುತ್ತೇವೆ" ಎಂಬ ಕಾಸಿಂ ರಜ್ವಿಯ ಎಚ್ಚರಿಕೆಗೆ ಅಷ್ಟೇ ಸಮಾಧಾನ ಚಿತ್ತರಾಗಿ ಪಟೇಲರು "ನೀವು ಆತ್ಮಹತ್ಯೆಗೇ ಸಂಕಲ್ಪ ಮಾಡಿರುವಾಗ ನಾನು ಹೇಗೆ ನಿವಾರಿಸಲಿ" ಎಂಬ ಪ್ರತ್ಯುತ್ತರದೊಂದಿಗೆ ಕಳುಹಿಸಿಕೊಟ್ಟಿದ್ದರು. 1948ರ ಜೂನ್ 13ರಂದು ನಿಜಾಮನನ್ನು ರಕ್ಷಿಸುವ ತನ್ನ ಕೊನೆಯ ಪ್ರಯತ್ನವಾಗಿ ಮೌಂಟ್ ಬ್ಯಾಟನ್, ಭಾರತ ಸರ್ಕಾರ ಅಪೇಕ್ಷಿಸಿದಲ್ಲಿ ರಕ್ಷಣೆ, ವಿದೇಶಾಂಗ ಮತ್ತು ಸಂಪರ್ಕ ವ್ಯವಸ್ಥೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಬಯಸಿದ ಕಾನೂನುಗಳನ್ನು ನಿಜಾಮ್ ಸರ್ಕಾರ ಜಾರಿಮಾಡಬೇಕು ಎಂಬ ತಾತ್ಕಾಲಿಕ ಒಪ್ಪಂದವೊಂದನ್ನು ಹೈದರಾಬಾದಿಗೆ ಒಪ್ಪಿಸಿದ. ನಿರೀಕ್ಷೆಯಂತೆಯೇ ನಿಜಾಮ್ ಸರ್ಕಾರ ಈ ಕ್ರಮವನ್ನೂ ನಿರಾಕರಿಸುವದರೊಂದಿಗೆ ಮಿಲಿಟರಿ ಕಾರ್ಯಾಚರಣೆಯ ಸಾಧ್ಯತೆ ದಟ್ಟವಾಗತೊಡಗಿತ್ತು.

ಭಾರತದೊಂದಿಗೆ ವಿಲೀನವನ್ನು ವಿರೋಧಿಸಿ ನಿಜಾಮ ವಿಶ್ವಸಂಸ್ಥೆಗೆ ದೂರನ್ನೊಯ್ದ. ಅಮೇರಿಕಾದ ಅಂದಿನ ಅಧ್ಯಕ್ಷರಾಗಿದ್ದ ಹ್ಯಾರಿ ಟ್ರೂಮನ್‌ರ ಮಧ್ಯಸ್ಥಿಕೆ ಕೋರಿ ಪತ್ರವನ್ನೂ ಬರೆದಿದ್ದ. ಏತನ್ಮಧ್ಯೆ ಹೈದರಾಬಾದಿನ ಜನಜೀವನ ಪೂರ್ತಿ ಹಳಿತಪ್ಪಿತ್ತು. ನಡುರಾತ್ರಿಯಲ್ಲಿ ಪಾಕಿಸ್ತಾನದ ಯುದ್ಧ ವಿಮಾನಗಳು ಬೀದರ್, ವಾರಂಗಲ್ ಮುಂತಾದೆಡೆ ಇಳಿದು ಶಸ್ತ್ರಾಸ್ತ್ರಗಳನ್ನು, ಯುದ್ಧಸಾಮಗ್ರಿಗಳನ್ನು ರಜಾಕಾರ್ ಪಡೆಗಳಿಗೆ ಒದಗಿಸಿ ಮರಳುತ್ತಿದ್ದವು. ರಜಾಕಾರರು ಮತ್ತು ಕಮ್ಯೂನಿಸ್ಟರ ಮಧ್ಯೆ ದುಷ್ಟಕೂಟವೇರ್ಪಟ್ಟು ವಿಶೇಷವಾಗಿ ಹಿಂದು ಜನರ ಮೇಲೆ ದಬ್ಬಾಳಿಕೆ, ಹಿಂಸೆಗಳ ಕಂಡರಿಯದ ಸರಣಿ ತಾಂಡವವಾಡತೊಡಗಿತು.

ಇಷ್ಟೆಲ್ಲಾ ಘಟನೆಗಳು ನಡೆದಿದ್ದರೂ ಪ್ರಧಾನಿ ನೆಹರು ಮಾತ್ರ 1948ರ ಸೆಪ್ಟೆಂಬರ್ 8ರ ಸಂಪುಟ ಸಭೆಯಲ್ಲಿ ನಿಜಾಮ್ ಸರ್ಕಾರದ ವಿರುದ್ಧ ಸೇನಾ ಕಾರ್ಯಾಚರಣೆಯನ್ನು ವಿರೋಧಿಸಿದರು ಮತ್ತು ಹಾಗೆ ವಿರೋಧಿಸಿದ ಅಂದಿನ ಸಭೆಯ ಏಕಮಾತ್ರ ಸದಸ್ಯ ಅವರಾಗಿದ್ದರು. ಬಂದ ಕಂಟಕಗಳನ್ನೆಲ್ಲ ಪಟೇಲ್ ಚಾಣಾಕ್ಷತನದಿಂದ ಪರಿಹರಿಸಿ ಸೆಪ್ಟೆಂಬರ್ 13ರ ಬೆಳಿಗ್ಗೆ ಕಾರ್ಯಾಚರಣೆ ಶುರುವಾಗುವಂತೆ ನೋಡಿಕೊಂಡರು. ದೆಹಲಿಯ ಕೆಂಪುಕೋಟೆಯ ಮೇಲೆ ಇಸ್ಲಾಮೀ ಧ್ವಜವನ್ನು ಹಾರಿಸುವ ಕನಸುಕಾಣುತ್ತಿದ್ದ ರಜಾಕಾರರ ಪಡೆ ಭಾರತೀಯ ಸೈನ್ಯದೆದುರು 5 ದಿನಗಳಲ್ಲೇ ಪತನ ಕಾಣುವುದರೊಂದಿಗೆ ಸೆಪ್ಟೆಂಬರ್ 17 -1948 ರಲ್ಲಿ ಹೈದರಾಬಾದ್ ನಿಜಾಮನ ಹಿಡಿತದಿಂದ ಮುಕ್ತವಾಯಿತು, ಭಾರತದ ಅವಿಭಾಜ್ಯ ಭಾಗವಾಯಿತು.

---

## ಪುಸ್ತಕದಿಂದ...

ನಮ್ಮ ದೇಶದಲ್ಲಿ ಕೆಲವು ಕಾಲ ನೆಲೆಸಿದ್ದ ಹ್ಯು-ಯೆನ್ ತ್ಸಾಂಗ್ ಸಹ ನಮ್ಮನ್ನು 'ಸಿಂತು' ಅಥವಾ 'ಹಿಂತು' ಎಂದು ಕರೆದಿದ್ದಾನೆ. ಪಾರ್ಥಿಯನ್ ಜನರು ಮಾತ್ರ ಅಫ್ಘಾನಿಸ್ತಾನವನ್ನು ಶ್ವೇತದ್ವೀಪ ಎಂದು ಹೇಳಿದ್ದರು. ಇಂಥ ಕೆಲವರ ಹೇಳಿಕೆಯನ್ನು ಬಿಟ್ಟರೆ, ಎಲ್ಲರೂ ನಮಗೆ ಭಾರತೀಯರು ಎಂಬ ನಮ್ಮ ಹೊಸ ಹೆಸರನ್ನು ಬಳಸದೆ 'ಹಿಂದು' ಎಂಬ ಪ್ರಾಚೀನ ಹೆಸರನ್ನೇ ಉಪಯೋಗಿಸುತ್ತಾ ನಮ್ಮ ದೇಶವನ್ನು 'ಹಿಂದೂಸ್ಥಾನ' ಎಂದೇ ಕರೆಯುತ್ತಾ ಬಂದಿದ್ದಾರೆ.

ಅದೇ ರೀತಿ, ಭರತಖಂಡ, ಭರತವರ್ಷ ಎಂಬ ಹೊಸ ಹೆಸರುಗಳು ಮರೆಯಾಗಿ, ಮೊದಲಿದ್ದ 'ಹಿಂದುಸ್ಥಾನ' ಎಂಬ ಹೆಸರೇ ಬಳಕೆಯಲ್ಲಿ ಉಳಿದುಕೊಂಡಿತು. ನಾವು ಇಟ್ಟುಕೊಳ್ಳುವ ಹೆಸರಿಗಿಂತ ಬೇರೆಯವರು ನಮ್ಮನ್ನು ಹೇಗೆ ಕರೆಯುವರೋ ಹಾಗೆ ಅದೇ ಪ್ರಚಾರದಲ್ಲಿರುವುದು ಸ್ವಾಭಾವಿಕ.




**ಕೃತಿ : ಹಿಂದುತ್ವ**

ಲೇಖಕರು: ವಿನಾಯಕ ದಾಮೋದರ ಸಾವರ್ಕರ
(ಮರಾಠಿ ಮೂಲ) ಕನ್ನಡಕ್ಕೆ : ಜಿ. ಬಿ. ಹರೀಶ್

ಹಿಂದುಗಳೆಂದರೆ ಯಾರು? ಭಾರತದಲ್ಲಿ ಹುಟ್ಟಿದವರೆಲ್ಲ ಹಿಂದುಗಳೇ? ಆಶ್ರಮ ವ್ಯವಸ್ಥೆ, ವೇದಗಳಲ್ಲಿ ನಂಬಿಕೆ ಇದ್ದವರಷ್ಟೇ ಹಿಂದುಗಳೇ? ಅವರ ಐತಿಹಾಸಿಕತೆ, ಭವ್ಯತೆಗಳ ಜೊತೆಗೇ ಸದ್ಯದ ಆತಂಕಗಳ ಕುರಿತಾಗಿಯೂ ವಿವರಿಸುವ ಅಧಿಕಾರಿಕ ಕೃತಿ.

## ಎಲ್ಲೋ ಕೇಳಿದ ಕಥೆ

ಸಮರ್ಥ ರಾಮದಾಸ ಸ್ವಾಮಿಗಳು ತಮ್ಮ ಶಿಷ್ಯಂದಿರೊಂದಿಗೆ ಮಹಾರಾಷ್ಟ್ರದ ಸಜ್ಜನಗಡದ ಕೋಟೆಯಲ್ಲಿ ವಾಸವಾಗಿದ್ದರು.

ಆ ಕೋಟೆಯಲ್ಲಿ ನೀರಿನ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ಕಲ್ಯಾಣನೆಂಬ ಶಿಷ್ಯ ಕೋಟೆಯ ಕೆಳಗಿದ್ದ ಹಳ್ಳಿಯಿಂದ ನೀರು ತುಂಬಿ ತರುತ್ತಿದ್ದ. ಈ ಕಾರ್ಯದಲ್ಲೇ ಆತನ ದಿನದ ಬಹಳಷ್ಟು ಸಮಯ ಕಳೆದುಹೋಗುತ್ತಿತ್ತು. ಹೀಗಾಗಿ ಅವನಿಗೆ ಅಧ್ಯಯನ ಮಾಡಲು ತುಂಬಾ ಕಡಿಮೆ ಸಮಯ ಸಿಗುತ್ತಿತ್ತು. ಉಳಿದ ಶಿಷ್ಯಂದಿರು ದಿನವಿಡೀ ಪ್ರಶ್ನೋತ್ತರ ಮತ್ತು ವಿಚಾರ ವಿನಿಮಯಗಳನ್ನು ಮಾಡುತ್ತಾ ಗುರುಗಳಿಂದ ಧಾರ್ಮಿಕಗ್ರಂಥಗಳ ಬಗ್ಗೆ ಮಾರ್ಗದರ್ಶನ ಪಡೆದುಕೊಳ್ಳುತ್ತಿದ್ದರು.

ಇಷ್ಟಾದರೂ ಕಲ್ಯಾಣನೇ ಗುರುಗಳ ವಾತ್ಸಲ್ಯಕ್ಕೆ ಪಾತ್ರನಾಗಿದ್ದನು. ಗುರುಗಳ ಸಮಕ್ಷದಲ್ಲಿಯೇ ಅವರು ಹೇಳಿದಂತೆಯೇ ಅಧ್ಯಯನರತರಾದರೂ ತಮಗಿಂತ ಕಡಿಮೆ ತಿಳಿದಿರುವ ಕಲ್ಯಾಣನ ಮೇಲೆ ಗುರುಗಳ ಪ್ರೀತಿ ಅಧಿಕವೇಕೆ ಎಂದು ಇತರ ಶಿಷ್ಯರಿಗೆ ಅರ್ಥವಾಗುತ್ತಿರಲಿಲ್ಲ. ಆದ್ದರಿಂದ ಅವರು ಕಲ್ಯಾಣನ ಮೇಲೆ ಮತ್ಸರ ಪಡುತ್ತಿದ್ದರು. ಗುರುಗಳಿಗೆ ಉಳಿದ ಶಿಷ್ಯರ ಈ ವ್ಯವಹಾರ ಚೆನ್ನಾಗಿ ತಿಳಿದಿತ್ತು.

ಒಂದು ದಿನ ಶಿಷ್ಯಂದಿರಿಗೆ ಮಾರ್ಗದರ್ಶನ ಮಾಡುತ್ತಿದ್ದಾಗ ಸಮರ್ಥರು ಕ್ಲಿಷ್ಟವಾದ ಪ್ರಶ್ನೆಯೊಂದನ್ನು ಕೇಳಿದರು. ಯಾರಿಗೂ ಉತ್ತರ ಹೇಳಲಾಗಲಿಲ್ಲ. ಅದೇ ಸಮಯದಲ್ಲಿ ಕಲ್ಯಾಣನು ನೀರು ತರಲು ಅಲ್ಲಿಂದ ಹಾದು ಹೋಗುತ್ತಿದ್ದನು. ಆಗ ಗುರುಗಳು ಅವನನ್ನು ಕರೆದು ಅದೇ ಪ್ರಶ್ನೆಯನ್ನು ಕೇಳಿದರು. ಎಲ್ಲರೂ ಆಶ್ಚರ್ಯಗೊಳ್ಳುವಂತೆ, ಕಲ್ಯಾಣ ನೀಡಿದ ಉತ್ತರ ಸರಿಯಾಗಿತ್ತು.

ಉಳಿದ ಶಿಷ್ಯರು ರಾಮದಾಸ ಸ್ವಾಮಿಗಳಲ್ಲಿಯೇ ನೇರವಾಗಿ, "ಕಲ್ಯಾಣನು ಯಾವಾಗಲೋ ಒಂದು ಸಲ ನಮ್ಮೊಂದಿಗೆ ಶಾಸ್ತ್ರಾಧ್ಯಯನ ಮಾಡುತ್ತಾನೆ. ಅವನಿಗೆ ಇಂತಹ ಕ್ಲಿಷ್ಟ ಪ್ರಶ್ನೆಗೆ ಉತ್ತರ ಕೊಡಲು ಹೇಗೆ ಸಾಧ್ಯವಾಯಿತು?" ಎಂದು ಕೇಳಿದರು. ಅದಕ್ಕೆ ಗುರುಗಳು, "ಧಾರ್ಮಿಕಗ್ರಂಥಗಳು ಬೋಧಿಸುವುದನ್ನು ಕಾರ್ಯತಃ ಮಾಡುತ್ತಿರುವವನು ಕಲ್ಯಾಣನೊಬ್ಬನೇ. ಮಾಡುವ ಕೆಲಸವನ್ನು ಪ್ರತಿದಿನ ಭಗವಂತನಿಗೋಸ್ಕರವೇ ಮಾಡುತ್ತಿದ್ದೇನೆ ಎಂಬ ಭಾವವನ್ನಿಟ್ಟುಕೊಂಡು ನಿಜವಾದ ಅರ್ಥದಲ್ಲಿ ಸತ್‌ಸೇವೆಯನ್ನು ಮಾಡುತ್ತಾನೆ ಹಾಗಾಗಿಯೇ ಅವನಿಗೆ ಪ್ರಶ್ನೆಯ ಉತ್ತರ ಸರಳವಾಗಿ ಅರ್ಥವಾಗಿದೆ" ಎಚಿದರು.

ಧಾರ್ಮಿಕಗ್ರಂಥಗಳ ಕುರಿತಾದ ಕೇವಲ ಬೌದ್ಧಿಕ ತಿಳಿವಳಿಕೆ ಸಾಲದು. ಅದನ್ನು ಅನುಭವಿಸಿ ಬದುಕಬೇಕು ಎಂಬ ಗುರುಗಳ ಪಾಠ ಶಿಷ್ಯಂದಿರ ಮನಮುಟ್ಟಿತ್ತು.

ಸಂಪಾದಕೀಯ ಸಹಕಾರ : ಶೈಲೇಶ್ ಕುಲಕರ್ಣಿ, ಅನಿಲ್‌ಕುಮಾರ ಮೊಳಹಳ್ಳಿ, ರಾಧಾಕೃಷ್ಣ ಹೊಳ್ಳ, ಸುನೀಲ್ ಕುಲಕರ್ಣಿ (www.news13.in), ಸತ್ಯನಾರಾಯಣ ಶಾನಭಾಗ್, ಪ್ರದೀಪ್ ಕುಂತೂರ್

# ಅಮೇರಿಕದ ನೆಲದಲ್ಲಿ ಸಿಡಿಲ ಸನ್ಯಾಸಿ ಸ್ವಾಮಿ ವಿವೇಕಾನಂದರು
# ಹಿಂದೂ ಧರ್ಮದ ಪತಾಕೆ ಹಾರಿಸಿದ ಘಟನೆಗೆ 125 ವರ್ಷಗಳು

ಹಿಂದೂ ಧರ್ಮದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಷಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಜಗತ್ತಿನೆದುರು ಸ್ವಾಮಿ ವಿವೇಕನಂದರು ಅನಾವರಣ ಮಾಡಿ ಇಂದಿಗೆ 125 ವರ್ಷ ತುಂಬಿದೆ.

1893ರ ಸೆಪ್ಟೆಂಬರ್ 11ರಂದು ಅಮೆರಿಕದ ಚಿಕಾಗೋದಲ್ಲಿ ಸ್ವಾಮಿ ವಿವೇಕಾನಂದ ಮಾಡಿದ ಐತಿಹಾಸಿಕ ಭಾಷಣ ಭಾರತದ ಇತಿಹಾಸದ ಪುಟಗಳಲ್ಲಿನ ಮರೆಯಲಾಗದ ಕ್ಷಣ.

ವಿಭಿನ್ನ ಜಾತಿ, ಮತಗಳ ಮಾನವ ಸಂಕುಲವನ್ನು ಒಂದೇ ಗೂಡಿನಲ್ಲಿ ಪೋಷಿಸುತ್ತಿರುವ ಭಾರತವನ್ನು ಪ್ರತಿನಿಧಿಸಿ ವಿವೇಕಾನಂದರು ಮಾಡಿದ ಭಾಷಣ ಇಂದಿಗೂ ಭಾರತೀಯರಲ್ಲಿ ಸ್ವಾಭಿಮಾನ ಬಡಿದೆಬ್ಬಿಸುತ್ತದೆ.

ಕ್ರೈಸ್ತ ಮತದ ದೊಡ್ಡದೆಂದು ಬಿಂಬಿಸುವ ಸಲುವಾಗಿಯೇ ಅಮೇಕರಿಕ ಚಿಕಾಗೋ ನಗರದಲ್ಲಿ ಏರ್ಪಡಿಸಲಾಗಿದ್ದ ವಿಶ್ವ ಧರ್ಮ ಸಮ್ಮೇಳನದಲ್ಲಿ, “ಅಮೇರಿಕಾದ ನನ್ನ ಪ್ರೀತಿಯ ಸಹೋದರ, ಸೋದರಿಯರೇ” ಎಂಬ ಐದು ಪದಗಳ ಕಂಚಿನ ಕಂಠದ ವಾಕ್ಯವು ಪಾಶ್ಚಾತ್ಯರನ್ನು ಮೂಕವಿಸ್ಮಿತಗೊಳಿಸಿತು. ಸ್ವಾಮೀಜಿಯವರ ಮಾತಿಗೆ ನಿಲ್ಲದೇ ಕರತಾಡನ ಮೊಳಗಿತು. ಹಿಂದೂ ಧರ್ಮವನ್ನು ಕಡೆಗಣಿಸುತ್ತಿದ್ದ ಪಾಶ್ಚಾತ್ಯರಿಗೆ ಸನಾತನ ಧರ್ಮದ ಮಹತ್ವವನ್ನು ಕೇವಲ ಒಬ್ಬ ವ್ಯಕ್ತಿ ವಿಶ್ವದಾದ್ಯಂತ ಸಾರಿದ್ದರು.

ಅದು ಸ್ವತಂತ್ರಪೂರ್ವ ಕಾಲ. ಭಾರತೀಯತೆ, ಭಾರತೀಯ ಸಂಸ್ಕೃತಿ, ಭಾರತೀಯ ಪರಂಪರೆ ಮತ್ತು ಹಿಂದೂ ಧರ್ಮವನ್ನು ನಿಂದಿಸುತ್ತಿದ್ದ ಕಾಲವದು. ಅಂತಹ ಸಂದರ್ಭದಲ್ಲಿ ವಿದೇಶಕ್ಕೆ ಪ್ರಯಣ ಬೆಳೆಸಿ ಭಾರತೀಯತೆಯನ್ನು ಹಿಂದೂ ಧರ್ಮದ ಸಾರವನ್ನು ವಿದೇಶಿಯರಿಗೆ ಭೋಧಿಸಿ ಭಾರತೀಯರ ಸದ್ಗುಣಗಳನ್ನು ಜಾಗತಿಕ ಮಟ್ಟದಲ್ಲಿ ಮಿಂಚಿಸಿದ್ದು ಸ್ವಾಮಿ ವಿವೇಕಾನಂದರು. ವಿಶ್ವ ಧರ್ಮ ಸಮ್ಮೇಳನದಲ್ಲಿ ವಿಶ್ವಕ್ಕೆ ಭಾರತದ ಜ್ಞಾನ ಸಂಪತ್ತನ್ನು ಪರಿಚಯಿಸಿದ ಕೀರ್ತಿ ವಿವೇಕಾನಂದರಿಗೆ ಸಲ್ಲುತ್ತದೆ.

ಸ್ವಾಮಿ ವಿವೇಕಾನಂದರ ಈ ಮಹತ್ಕಾರ್ಯದ ಕುರಿತು ಸೋದರಿ ನಿವೇದಿತಾ ಹೀಗೆ ಹೇಳಿದ್ದಾರೆ: “ಸ್ವಾಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ನೀಡಿದ ಉಪನ್ಯಾಸಗಳ ಸ್ವರೂಪವನ್ನು ಹೀಗೆ ಸಂಕ್ಷೇಪಿಸಬಹುದು: ಪ್ರಾರಂಭದಲ್ಲಿ ಹಿಂದುಗಳ ಧಾರ್ಮಿಕ ಭಾವನೆಗಳನ್ನು ಕುರಿತು ಹೇಳಹೊರಟರು. ಆದರೆ ಅವರು ತಮ್ಮ ಉಪನ್ಯಾಸ ಮುಗಿಸಿದಾಗ ಹಿಂದೂ ಧರ್ಮ ಪುನರ್ಸೃಷ್ಟಿಗೊಂಡಿತ್ತು.”

“ಏಕೆಂದರೆ ಸ್ವಾಮಿ ವಿವೇಕಾನಂದರು ತಮ್ಮ ಸ್ವಂತ ಅನುಭವವನ್ನು ನಿರೂಪಿಸುವುದಕ್ಕೆ ಹೊರಡಲಿಲ್ಲ. ತಮ್ಮ ಗುರುವಿನ ಜೀವನ ಚರಿತ್ರೆಯನ್ನು ನಿರೂಪಿಸುವುದಕ್ಕೂ ಆ ವೇದಿಕೆಯನ್ನು ಬಳಸಿಕೊಳ್ಳಲಿಲ್ಲ. ಅವೆರಡರ ಬದಲು ಪ್ರಾಚೀನ ಭರತಖಂಡ ರೂಪಿಸಿದ ಧಾರ್ಮಿಕ ಪ್ರಜ್ಞೆ, ತಮ್ಮ ದೇಶದ ಇಡೀ ಜನತೆಯ ಸಂದೇಶ ಸ್ವಾಮೀಜಿಯವರ ಮೂಲಕ ಅಲ್ಲಿ ಪ್ರಕಟಗೊಂಡವು. ನವತಾರುಣ್ಯದಲ್ಲಿದ್ದ ಪಶ್ಚಿಮದೇಶವನ್ನು ಉದ್ದೇಶಿಸಿ ಸ್ವಾಮೀಜಿ ಮಾತನಾಡುತ್ತಿದ್ದರು.

ಅದು ಮಧ್ಯಾಹ್ನದ ಸಮಯ. ಅದೇ ಸಮಯದಲ್ಲಿ ಪೂರ್ವಾರ್ಧಗೋಳದ ಕತ್ತಲು ಕವಿದ ಭಾಗದಲ್ಲಿ, ಪೆಸಿಫಿಕ್ ಸಾಗರದ ಇನ್ನೊಂದು ಕಡೆಯಲ್ಲಿ ರಾಷ್ಟ್ರವೊಂದು ಮಲಗಿ ನಿದ್ರಿಸುತ್ತಿತ್ತು. ತನ್ನದೇ ಮಹತ್ವ, ಶಕ್ತಿಗಳ ರಹಸ್ಯವನ್ನು ಸ್ವಾಮೀಜಿಯ ಯಾವ ಮಾತುಗಳು ತೆರೆದು ಪಶ್ಚಿಮಕ್ಕೆ ತೋರಿದುವೋ ಅದನ್ನು ಮರುದಿನದ ಮುಂಬೆಳಗು ಹೊತ್ತು ತರುವುದನ್ನು ಆ ರಾಷ್ಟ್ರ ನಿರೀಕ್ಷಿಸುತ್ತಿತ್ತು.” ■

## ರಾಷ್ಟ್ರೋತ್ಥಾನ ಪರಿಷತ್‌ನ ‘ತಪಸ್’ ಮತ್ತು ‘ಸಾಧನಾ’ ಪ್ರಕಲ್ಪಗಳ
# ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ರಾಜ್ಯದ ಸಾಮಾಜಿಕವಾಗಿ ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ನೆರವಾಗುವ ರಾಷ್ಟ್ರೋತ್ಥಾನ ಪರಿಷತ್‌ನ ಯೋಜನೆಯಾದ ‘ತಪಸ್’(ಹುಡುಗರಿಗೆ) ಹಾಗೂ ‘ಸಾಧನಾ’ (ಹುಡುಗಿಯರಿಗೆ) ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.

ಅರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ಕುಟುಂಬದ ಪ್ರತಿಭಾವಂತ ಮಕ್ಕಳಿಗೆ ಪಿಯುಸಿ ಶಿಕ್ಷಣದ ಜೊತೆಗೆ ಉನ್ನತ ಶಿಕ್ಷಣಕ್ಕೆ ಅರ್ಹ ತರಬೇತಿ ನೀಡುವ ಸಲುವಾಗಿ ರಾಷ್ಟ್ರೋತ್ಥಾನ ಪರಿಷತ್ ‘ತಪಸ್’(ಹುಡುಗರಿಗೆ) ಹಾಗೂ ‘ಸಾಧನಾ’ (ಹುಡುಗಿಯರಿಗೆ) ಯೋಜನೆಯನ್ನು ಆರಂಬಿಸಿದೆ. ಈ ಯೋಜನೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಸತಿ ಸಹಿತ ಶಿಕ್ಷಣವನ್ನು ಉಚಿತವಾಗಿ ನೀಡಲಾಗುತ್ತದೆ. ಬಾಲಕರಿಗಾಗಿ ಇರುವ ತಪಸ್ ಯೋಜನೆಯ ಮೂಲಕ ಪಿಯುಸಿ ಶಿಕ್ಷಣದ ಜೊತೆಗೆ ಪ್ರತಿಷ್ಠಿತ ಐಐಟಿ–ಜೆಇಇ ಮುಂತಾದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತದೆ. ಬಾಲಕಿಯರಿಗಾಗಿ ‘ಸಾಧನಾ’ ಯೋಜನೆಯ ಮೂಲಕ ಪಿಯುಸಿ ಶಿಕ್ಷಣದ ಜೊತೆಗೆ NEET, CET, KVPY ಮುಂತಾದ ಸ್ಪರ್ಧಾತ್ಮಕ ಪ್ರವೇಶ ಪರೀಕ್ಷೆಗಳಿಗೆ ಅಗತ್ಯ ತರಬೇತಿ ನೀಡಲಾಗುತ್ತದೆ.

ಪ್ರಸ್ತುತ 10ನೇ ತರಗತಿ ಓದುತ್ತಿರುವ ಹಾಗೂ 9ನೇ ತರಗತಿಯಲ್ಲಿ ಶೇ. 80ಕ್ಕಿಂತಲೂ ಅಧಿಕ ಅಂಕಗಳನ್ನು ಪಡೆದ ಆರ್ಥಿಕವಾಗಿ ಹಿಂದುಳಿದ (ಪೋಷಕರ ವಾರ್ಷಿಕ ವರಮಾನ 1,50,000 ಮೀರಿರಬಾರದು) ವಿದ್ಯಾರ್ಥಿಗಳು ಇದಕ್ಕೆ ಅರ್ಜಿ ಸಲ್ಲಿಸಬಹುದು. ಬಾಲಕರು ತಪಸ್‌ನ ವೆಬ್‌ಸೈಟ್ (www.tapasedu.org) ಹಾಗೂ ಬಾಲಕಿಯರು ‘ಸಾಧನಾ’ದ ವೆಬ್‌ಸೈಟ್ (www.rpsaadhana.org) ನಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ಮುಖ್ಯೋಪಾಧ್ಯಾಯರ ಸಹಿಯೊಂದಿಗೆ ಕೆಳಕಂಡ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಡಿಸೆಂಬರ್ 10.

ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಡಿಸೆಂಬರ್ 25ರಂದು ಆಯಾ ಜಿಲ್ಲೆಗಳ ಜಿಲ್ಲಾಕೇಂದ್ರದಲ್ಲಿ ಅರ್ಹತಾ ಪರೀಕ್ಷೆ ನಡೆಯಲಿದೆ. ಈ ಪರೀಕ್ಷಾ ಕೇಂದ್ರಗಳ ಮಾಹಿತಿಯನ್ನು ಡಿಸೆಂಬರ್ ಮೊದಲ ವಾರದಲ್ಲಿ ಆಯಾ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗುವುದು. ಅರ್ಹತಾ ಪರೀಕ್ಷೆಗೆ ಅಗತ್ಯ ಮಾದರಿ ಪ್ರಶ್ನೆ ಪತ್ರಿಕೆಗಳು ಆಯಾ ವೆಬ್‌ಸೈಟ್‌ಗಳಲ್ಲಿ ಲಭ್ಯವಿದೆ.

**ಅರ್ಜಿ ಸಲ್ಲಿಸಬೇಕಾದ ವಿಳಾಸ : ಸಂಯೋಜಕರು, ತಪಸ್/ಸಾಧನಾ ಪ್ರಕಲ್ಪ,**
**ರಾಷ್ಟ್ರೋತ್ಥಾನ ಪರಿಷತ್, ‘ಕೇಶವಶಿಲ್ಪ’, ಕೆಂಪೇಗೌಡ ನಗರ, ಬೆಂಗಳೂರು – 560 019**
**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 94812 01144 (ಯೋಜನೆಯ ಸಂಯೋಜಕರು)**

1 ನೇ ಪುಟದಿಂದ ➢➢

ಇಂದಿನ ಮಾವೋವಾದಿ ಚಳುವಳಿಗೆ ಅರ್ಬನ್ ನಕ್ಸಲರಿಂದ ಆಗಬೇಕಾದ ಪ್ರಮುಖ ಎರಡು ಕಾರ್ಯ – ಒಂದು ಆರ್ಥಿಕ, ಸರಬರಾಜು, ಕಾನೂನು ಮೊದಲಾದ ಬೆಂಬಲ. ಇನ್ನೊಂದು ಮಾವೋವಾದಿಗಳ ಚಳುವಳಿಗೆ ಬೇಕಾದ ಯುವ ಪ್ರತಿಭಾವಂತ ಜನಸಂಪನ್ಮೂಲ, ಮತ್ತು ಅವರ ನೇಮಕಾತಿ. ಒಂದು ವಿಶ್ಲೇಷಣೆಯ ಪ್ರಕಾರ ಛತ್ತೀಸ್‌ಗಢ್, ಜಾರ್ಖಂಡ್, ಆಂಧ್ರ, ತೆಲಂಗಾಣ ಮೊದಲಾದ ರಾಜ್ಯಗಳ ರೆಡ್ ಕಾರಿಡಾರ್ ಎನ್ನಲಾಗುವ ಪ್ರದೇಶಗಳಲ್ಲಿ ನಡೆಯುವ ಗಣಿಗಾರಿಕೆ, ರಸ್ತೆ ಬ್ರಿಡ್ಜ್ ನಿರ್ಮಾಣ ಕಾಮಗಾರಿ ಮೊದಲಾದವುಗಳಿಂದ ಮಾವೋವಾದಿಗಳು ಕೋಟ್ಯಾಂತರ ರೂಪಾಯಿ ಹಣ ವಸೂಲು ಮಾಡುತ್ತಾರೆ. ಒಂದು ಅಂದಾಜಿನ ಪ್ರಕಾರ ಇದು 11 ಸಾವಿರ ಕೋಟಿ ರೂಪಾಯಿಗಳನ್ನು ಮೀರುತ್ತದೆ. ಈ ಹಣ ಅರ್ಬನ್ ನಕ್ಸಲೀಯರಿಗೂ ಸಂದಾಯವಾಗುತ್ತದೆ. ನಗರಗಳಲ್ಲಿ ಮಾವೋವಾದದ ಚಳುವಳಿ ಕಾರ್ಯಗಳಿಗೆ ಹಾಗೆಯೇ ಶಸ್ತ್ರಾಸ್ತ್ರ ಖರೀದಿಗೆ ಇದು ಬಳಕೆಯಾಗುತ್ತದೆ.

ಮಾವೋವಾದಿ ವಿಚಾರಧಾರೆ ಮತ್ತು ಚಳುವಳಿ ಗ್ರಾಮೀಣ ಭಾಗದಲ್ಲಿ ಕೊನೆಯಾಗುತ್ತಿದ್ದರೂ ಅರ್ಬನ್ ನಕ್ಸಲೀಯರು ನಗರಗಳಲ್ಲಿ ಅದನ್ನು ಜೀವಂತವಾಗಿರಿಸಿದ್ದಾರೆ. ಭಾರತವನ್ನು ಅಸ್ಥಿರಗೊಳಿಸುವುದು, ವರ್ಗ ಸಂಘರ್ಷ, ಕ್ರಾಂತಿಯ ಭ್ರಾಂತಿ ವಿಚಾರಗಳನ್ನು ಪ್ರಚಾರ ಮಾಡುವುದು ಮತ್ತು ತಮ್ಮ ವ್ಯವಹಾರಗಳನ್ನು ಗಟ್ಟಿಗೊಳಿಸಿಕೊಳ್ಳುವುದು ಅವರ ಒಂದಂಶದ ಯೋಜನೆ. ಅನೇಕ ತಥಾಕಥಿತ ಬುದ್ಧಿಜೀವಿಗಳು, ಪತ್ರಕರ್ತರು, ಪ್ರೊಫೆಸರುಗಳು, ವಕೀಲರು ಈ ಅಪಾಯಕಾರಿ ಆಂದೋಲನದ ಭಾಗವಾಗಿದ್ದಾರೆ. ಮಾನವ ಹಕ್ಕುಗಳ ಪ್ರತಿಪಾದಕರೆಂದು ಎದೆಬಡಿದುಕೊಳ್ಳುವ ಅವರು ಅದಕ್ಕೆ ವ್ಯತಿರಿಕ್ತವಾಗಿ ಸಂಘರ್ಷ ಮತ್ತು ಹಿಂಸೆಯೇ ಮೂಲವಾಗಿರುವ ರಾಜಕೀಯ ವಿಚಾರಧಾರೆಯನ್ನು ಪ್ರಚಾರ ಮಾಡುತ್ತಿದ್ದಾರೆ. ಇಂತಹ ಅರ್ಬನ್ ನಕ್ಸಲೀಯರ ಬೇರುಗಳು ಇನ್ನೂ ಆಳಕ್ಕಿಳಿದು ನಮ್ಮ ಮನೆಯ ಮಕ್ಕಳೇ ಈ ಪಿತೂರಿಗೆ ಬಲಿಯಾಗುವ ಮೊದಲು, ನಾಗರಿಕರೇ, ಎಚ್ಚರಾಗುವುದು ಒಳ್ಳೆಯದು. ■

## ಸಾಲುದ್ದದ ಸುದ್ದಿಗಳು

ಜೈವಿಕ ಇಂಧನ ಬಳಸುವ ದೇಶದ ಮೊತ್ತಮೊದಲ ವಿಮಾನ “ಹಲ್ದಿ” ಪ್ರಯಾಣಿಕರನ್ನು ಹೊತ್ತು ಯಶಸ್ವಿ ಚೊಚ್ಚಲ ಹಾರಾಟ ನಡೆಸಿದೆ. ಉತ್ತರಾಖಂಡದ ಡೆಹರಾಡೂನ್‌ನಿಂದ ದೆಹಲಿಗೆ ಇತ್ತೀಚೆಗೆ ಹಾರಾಟ ನಡೆಸಿದ ಹಲ್ದಿ ದುಬಾರಿ ಪೆಟ್ರೋಲಿಯಂ ಇಂಧನಕ್ಕೆ ಅಗ್ಗದ ಪರ್ಯಾವನ್ನು ಒದಗಿಸುವ ನಿಟ್ಟಿನಲ್ಲಿ ಆಶಾಭಾವನೆಯನ್ನು ಹುಟ್ಟುಹಾಕಿದೆ. ಇದಕ್ಕೆ ಬಳಸಲಾದ ಜೈವಿಕ ಇಂಧನವನ್ನು ಛತ್ತೀಸ್‌ಗಢದ ಸುಮಾರು 500 ಕುಟುಂಬಗಳು ಬೆಳೆದ ಜತ್ರೋಪಾ ಬೀಜದಿಂದ ತಯಾರಿಸಲಾಗಿದೆ. ಪೆಟ್ರೋಲಿಯಂ ಇಂಧನಕ್ಕೆ ಹೋಲಿಸಿದರೆ ಜೈವಿಕ ಇಂಧನ ಶೇ 1.8ರಷ್ಟು ಹೆಚ್ಚು ದಕ್ಷತೆ ಹೊಂದಿದೆ ಎನ್ನುವುದು ಕೂಡ ಕಂಡುಬಂದಿದೆ. ■



**ಸ್ಮಾರ್ಟ್ ಫೋನ್‌ಗಳ ಅತಿಯಾದ ಬಳಕೆಯಿಂದ ಮಿದುಳಿನ ಸಾಮರ್ಥ್ಯ ಕ್ಷೀಣಿಸುತ್ತದೆ ಎಂದು ಅಮೇರಿಕದಲ್ಲಿ ನಡೆಸಿದ ಸಂಶೋಧನೆಯಲ್ಲಿ ಕಂಡು ಬಂದಿದೆ. 15–16 ವರ್ಷದ ವಿದ್ಯಾರ್ಥಿಗಳ ನಡುವೆ ಸುಮಾರು ಎರಡು ವರ್ಷಗಳ ಕಾಲ ನಡೆದ ಅಧ್ಯಯನದಿಂದ ಕಂಡು ಬಂದ ಅಂಶವೆಂದರೆ ಅತಿಯಾಗಿ ಸ್ಮಾಟಫೋನ್ ಬಳಸುವವರಲ್ಲಿ ಹೆಚ್ಚಿನವರು ಅಟೆನ್ಶನ್ ಡೆಫಿಸಿಟ್ ಹೈಪರ್ ಆ್ಯಕ್ಟಿವ್ ಡಿಸಾರ್ಡರ್ ಎನ್ನುವ ಮಾನಸಿಕ ಸಮಸ್ಯೆ ಕಂಡುಬಂದಿದೆ. ಅಂದರೆ ಇಂತಹ ಮಕ್ಕಳು ಒಂದು ಕಡೆ ಏಕಾಗ್ರವಾಗಿ ಗಮನ ಕೊಡಲಾರರು, ಸ್ಥಿರ ಚಿತ್ತದ ಕೊರತೆ, ಮಾನಸಿಕ ಕಿರಿಕಿರಿ ಮೊದಲಾದವುಗಳಿಗೆ ತುತ್ತಾಗಿರುವುದು ಕಂಡುಬಂದಿದೆ.** ■

ಇತ್ತೀಚೆಗೆ ಕೇರಳದಲ್ಲಿ ಉಂಟಾದ ನೆರೆ ಸಂದರ್ಭದಲ್ಲಿ ಕುಡಿಯುವ ನೀರಿನ ಅಗತ್ಯವನ್ನು ಪೂರೈಸಲು ಗುಜರಾತಿನ ಭಾವನಗರದ ಕೇಂದ್ರ ಲವಣ ಮತ್ತು ಸಮುದ್ರೀ ರಾಸಾಯನಿಕ ಸಂಶೋಧನಾ ಸಂಸ್ಥೆ (CSMCRI) ನೀರನ್ನು ಶುದ್ಧಿಕರಿಸುವ ಬಸ್ ಒಂದನ್ನು ಕೇರಳಕ್ಕೆ ರವಾನಿಸಿತು. ಸಂಪೂರ್ಣ ಸ್ವದೇಶಿ ನಿರ್ಮಿತ ಈ ಬಸ್ ಶುದ್ಧೀಕರಣ ಘಟಕ ಪ್ರತಿನಿತ್ಯ 40,000 ಲೀಟರ್ ಶುದ್ಧಿಕರಿಸಿದ ಕುಡಿಯಲು ಯೋಗ್ಯವಾದ ನೀರನ್ನು ನೀಡಬಲ್ಲದು. ಈ ಯಂತ್ರವು ಯಾವುದೇ ತರಹದ ಹೂಳು ಮಣ್ಣು ಸೇರಿರುವ ನೀರನ್ನಾದರೂ ಶುದ್ಧೀಕರಿಸಿ ಕುಡಿಯಲು ಯೋಗ್ಯವಾಗಿಸಬಲ್ಲದು. ಪಶ್ಚಿಮ ಬಂಗಾಳ, ಓಡಿಶಾ, ಉತ್ತರಾಖಂಡ ಮೊದಲಾದ ಕಡೆ ಪ್ರವಾಹ ಉಂಟಾದಾಗಲೂ ಈ ಬಸ್ ಸೇವೆ ಸಲ್ಲಿಸಿತ್ತು. ■

**ದೇವಸ್ಥಾನಕ್ಕೆ ಆಗಮಿಸುವ ಭಕ್ತರು ದೇವರಿಗೆ ಸಮರ್ಪಣೆ ಮಾಡುವ ಹೂ, ಎಲೆ, ಇತರ ಸಾವಯವ ವಸ್ತುಗಳು ಕೊನೆಗೆ ಸೇರುವುದು ಕಸದ ತೊಟ್ಟಿಯನ್ನೇ. ಪವಿತ್ರ ಎಂದು ಪರಿಗಣಿತವಾದ ಈ ವಸ್ತುಗಳು ಬಳಕೆಯಾದ ಬಳಿಕ ಮಾನವ ಕಾಲಿನಡಿಯ ಕಸವಾಗುತ್ತವೆ. ಆದರೆ ಈ ಪವಿತ್ರ ಕಸಗಳನ್ನು ಅತ್ಯದ್ಭುತ ರಸವನ್ನಾಗಿಸುವ ನಿಟ್ಟಿನಲ್ಲಿ ಅಹ್ಮದಾಬಾದ್‌ನ ಇಬ್ಬರು ಎಂಜಿನಿಯರಿಂಗ್ ವಿದ್ಯಾರ್ಥಿಗಳು ಮಹತ್ವದ ಹೆಜ್ಜೆಯಿಟ್ಟಿದ್ದಾರೆ. ದೇಗುಲದಲ್ಲಿ ಸೃಷ್ಟಿಯಾಗುವ ಕಸಗಳನ್ನು ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸುವ ಯಂತ್ರವನ್ನು ಯಶ್ ಭಟ್ ಮತ್ತು ಅರ್ಜುನ್ ಠಾಕೂರ್ ಅಭಿವೃದ್ಧಿಪಡಿಸಿದ್ದಾರೆ. ಪ್ರಾಯೋಗಿಕವಾಗಿ ದೇಗುಲಗಳಿಂದ 300 ಕೆಜಿ ಕಸಗಳನ್ನು ಸಂಗ್ರಹಿಸಿ ಅದನ್ನು ಗೊಬ್ಬರವನ್ನಾಗಿ ಇವರು ಪರಿವರ್ತಿಸಿದ್ದಾರೆ. ದೇವರಿಗೆ ನೀಡುವ ಹೂ, ಹಣ್ಣು, ತೆಂಗಿನ ಕಾಯಿ ಇತ್ಯಾದಿಗಳ ಬಗ್ಗೆ ಭಕ್ತರಿಗೆ ಭಾವನಾತ್ಮಕತೆ ಇರುತ್ತದೆ. ಹೀಗಾಗಿ ಇವುಗಳನ್ನು ಕೊಳಚೆಗೆ ಎಸೆಯುವ ಬದಲು ಸಾವಯವ ಗೊಬ್ಬರವಾಗಿ ಪರಿವರ್ತಿಸಬಹುದು. ಇದರಿಂದ ಗಿಡ, ಮರಗಳಿಗೆ ಸಾಕಷ್ಟು ಪ್ರಯೋಜನವಾಗುತ್ತದೆ ಎಂದು ಈ ವಿದ್ಯಾರ್ಥಿಗಳು ಹೇಳಿದ್ದಾರೆ. ಈ ಯಂತ್ರವನ್ನು ಬಳಸಿ ಅಹ್ಮದಾಬಾದ್ ಮಹಾನಗರ ಪಾಲಿಕೆ ದೇಗುಲಗಳ ಕಸವನ್ನು ಗೊಬ್ಬರವನ್ನಾಗಿಸುವ ಯೋಜನೆ ಅನುಷ್ಠಾನಕ್ಕೆ ತರಬೇಕು ಎಂಬುದು ಇವರ ಒತ್ತಾಸೆಯಾಗಿದೆ.** ■

ತಮ್ಮ ಹೌಸಿಂಗ್ ಸೊಸೈಟಿ ಆವರಣದೊಳಗಿನ ಮರಗಳನ್ನು ಉಳಿಸಿಕೊಳ್ಳುವ ಸಲುವಾಗಿ ಅಲ್ಲಿನ ನಿವಾಸಿಗಳು ಮರಗಳಿಗೆ ರಾಖಿ ಕಟ್ಟಿ ವಿಭಿನ್ನ ರೀತಿಯಲ್ಲಿ ಹೋರಾಟ ನಡೆಸಿದ್ದಾರೆ. ನೊಯ್ಡಾ ಸೆಕ್ಟರ್ 137ನ ಹೌಸಿಂಗ್ ಸೊಸೈಟಿಯ ಆವರಣದೊಳಗಿನ 7 ಮರಗಳನ್ನು ಪಾರ್ಕಿಂಗ್‌ಗೆ ಹೆಚ್ಚಿನ ಸ್ಥಳಾವಕಾಶ ಕಲ್ಪಿಸುವ ಸಲುವಾಗಿ ಬಿಲ್ಡರ್ ಕಡಿದು ಹಾಕಿದ್ದಾನೆ. ಇನ್ನಷ್ಟು ಮರಗಳನ್ನು ಕಡಿಯಲು ಆತ ಮುಂದಾಗಿದ್ದು, ನಿವಾಸಿಗಳು ಇದೀಗ ಹೋರಾಟದ ಹಾದಿ ಹಿಡಿದಿದ್ದಾರೆ. ಈ ಹಿನ್ನೆಲೆಯಲ್ಲಿ ಸೊಸೈಟಿಯೊಳಗಿನ ನಿವಾಸಿಗಳು ಮರಗಳಿಗೆ ರಾಖಿ ಕಟ್ಟಲಾರಂಭಿಸಿದ್ದಾರೆ. ಅವುಗಳನ್ನು ಅಪ್ಪಿ ಹಿಡಿದು ಕಡಿಯದಂತೆ ಘೋಷಣೆ ಕೂಗಿದ್ದಾರೆ. ನಿವಾಸಿಗಳ ಹೋರಾಟ ಚುರುಕುಗೊಂಡಂತೆ ಎಚ್ಚೆತ್ತುಗೊಂಡ ಅರಣ್ಯಾಧಿಕಾರಿಗಳು ಬಿಲ್ಡರ್ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ. ■

Date of Publication 10, September 2018

पुंगवा PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST
WITHOUT PREPAYMENT-WPP46 AT BENGALURU PSO, BG-560 026
ON 10TH AND 25TH OF EVERY MONTH REG.NO.CPMG/KA/BGS/102/2018-20

FORTNIGHTLY 15-09-2018



# ಕೇರಳ ಮತ್ತು ಕೊಡಗು ಪ್ರವಾಹ ಪರಿಹಾರದಲ್ಲಿ ಆರೆಸ್ಸೆಸ್ ಸ್ವಯಂಸೇವಕರ ಅವಿರತ ಸೇವೆ



ಸಂಘದಕ್ಷ, ಸಾವಧಾನ್, ವಿಶ್ರಾಮ್ ಈ ಶಬ್ದಗಳನ್ನು ಕೇಳಿದೊಡನೆ ಗಮನ ಎಲ್ಲೇ ಇದ್ದರೂ ಕಿವಿ ನಿಮಿರೇಳುತ್ತದೆ. ಸೇವಾನಿರತೆ, ಶಿಸ್ತು, ಬದ್ಧತೆ, ಕಷ್ಟ ಸಹಿಷ್ಣುತೆ ಮೊದಲಾದ ಗುಣಗಳು ಸಂಘದ ಮೊದಲ ಪಾಠಗಳು. ಒಂದರ್ಥದಲ್ಲಿ ಶಿಸ್ತಿಗೆ ಸಮಾನಾರ್ಥಕವೇ ಸಂಘ. ಮಳೆ, ಗಾಳಿ, ಅತಿವೃಷ್ಟಿ ಮುಂತಾದ ಪ್ರಕೃತಿ ವಿಕೋಪಗಳಾದಾಗ, ಅಲ್ಲಿಗೆ ಎಲ್ಲರ ಮುಂಚೆ ಕಂದು ಚಡ್ಡಿಯ ಸ್ವಯಂಸೇವಕರು ಹಾಜರಿರುತ್ತಾರೆ. ಹಲವಾರು ಸ್ಥಳಗಳಲ್ಲಿ ರಕ್ಷಣಾ ಪಡೆಯ ಯೋಧರು ಆಗಮಿಸುವ ಮುನ್ನವೇ ಸ್ವಯಂಸೇವಕರು ಪರಿಹಾರ ಕಾರ್ಯಾಚರಣೆಯನ್ನು ಪ್ರಾರಂಭಿಸಿಯಾಗಿರುತ್ತದೆ. ಹಗಲು, ಇರುಳು, ಚಳಿ, ಮಳೆ, ಬಿಸಿಲು, ಗಾಳಿ, ಊಟ, ತಿಂಡಿಯ ಪರಿವಿಲ್ಲದೆ ಸದಾ ಸೇವೆಯ ಅವಶ್ಯಕತೆ ಇರುವಲ್ಲಿ ಸ್ವಯಂಸೇವಕರು ಸನ್ನದ್ಧ.

ಸೇನೆಯನ್ನು ಹೊರತುಪಡಿಸಿ ಇತರೆ ಯಾವುದೇ ಸಂಘಟನೆಗಳು ತುರ್ತು ಸಂದರ್ಭಗಳಲ್ಲಿ ಪರಿಹಾರ ಕಾರ್ಯಗಳನ್ನು ನಿರ್ವಹಿಸುತ್ತಿದ್ದರೆ ಅದನ್ನು ತನ್ನ ಪ್ರಚಾರಕ್ಕೆ ಬಳಸಿಕೊಳ್ಳುವುದರಲ್ಲಿ ಸ್ವಲ್ಪವೂ ಹಿಂಜರಿಯುವುದಿಲ್ಲ. ಆದರೆ ಈ ಮಾತು ಸಂಘದ ವಿಷಯದಲ್ಲಿ ಅಪವಾದವಾಗಿದೆ. ಘಟನಾ ಸ್ಥಳ ಹೊರತುಪಡಿಸಿ ಹೊರ ಜಗತ್ತಿಗೆ ಸಂಘದ ನಿಸ್ವಾರ್ಥ ಸೇವೆಯ ಬಗ್ಗೆ ಅರಿವೇ ಇರುವುದಿಲ್ಲ. ಹೊಗಳಿದರೂ, ತೆಗಳಿದರೂ, ಯಾವುದೇ ಆರೋಪಗಳನ್ನು ಹೊರಿಸಿದರೂ ಸಂಘದ ಉತ್ತರ, ಕೋಣದ ಮೇಲೆ ಮಳೆ ಹುಯ್ದಂತೆ. ಏಕೆಂದರೆ ಸೇವೆಯೇ ಸಂಘದ ಉಸಿರು. ಇಂದಿನ ಮಾಧ್ಯಮಗಳು ಕೂಡ ರಾಷ್ಟ್ರ ರಕ್ಷಕರ ಸೇವೆಯನ್ನು ಬಿತ್ತರಿಸುವಲ್ಲಿ ಯಾವುದೇ ಪ್ರಯತ್ನ ಮಾಡದಿರುವುದು ಖೇದಕರ.

ಕೆಲವು ದಿನಗಳ ಹಿಂದೆ ಪ್ರಾಯಶಃ ಪ್ರತಿಯೊಬ್ಬರೂ ತಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರು. ಎಲ್ಲಿದ್ದನೋ ವರುಣ, ಚಿಕ್ಕಸೂಚನೆಯನ್ನೂ ನೀಡದೆ ಅಬ್ಬರಿಸಿ ಬೊಬ್ಬಿರಿದು ಕೊಡಗು ಮತ್ತು ಕೇರಳದ ಬಹುಭಾಗಗಳನ್ನು ಆಕ್ರಮಿಸಿಕೊಂಡ. ಜನ ಜೀವನ ಅಸ್ತವ್ಯಸ್ತ. ಜನ ಅಕ್ಷರಶಃ ಬೀದಿಗೆ ಬಂದರು. ಪ್ರವಾಹ ಪರಿಸ್ಥಿಯಿಂದಾಗಿ ತಲೆದೋರಿದ ರಸ್ತೆ ಕುಸಿತ, ಭೂಕುಸಿತಗಳು ರಕ್ಷಣೆಯ ಎಲ್ಲಾ ಸಾಧ್ಯತೆಗಳಿಗೆ ತಡೆಗೋಡೆಗಳಾಗಿ, ಜನರ ಜೀವನವನ್ನು ಮತ್ತಷ್ಟು ಕಂಗಾಲಾಗಿಸಿದವು. ನೋಡಿದಲೆಲ್ಲಾ ಕೆಂಪು ನೀರಿನ ಓಕುಳಿ, ರಕ್ಷಣೆಗಾಗಿ ಜನರ ಆಕ್ರಂದನ. ಪರಿಸ್ಥಿತಿಯನ್ನು ಅರಿತ ಸಂಘ, ಎಂದಿನಂತೆ ತನ್ನ ಸೇವಾಭಾರತಿ ಸಂಸ್ಥೆಯ ಮುಖೇನ ಪ್ರವಾಹ ಸಂತ್ರಸ್ತರ ಪುನರ್ವಸತಿ ಸೇವೆಯನ್ನು ಯುದ್ಧೋಪಾದಿಯಲ್ಲಿ ಆರಂಭಿಸಿತು. ಸೇನಾಪಡೆಗಿಂತಲೂ ಒಂದು ಹೆಜ್ಜೆ ಮುನ್ನ ಪರಿಹಾರ ಕಾರ್ಯಕ್ಕೆ ಧುಮುಕಿದ ಸಂಘ, ಪ್ರಕೃತಿ ವಿಕೋಪಕ್ಕೆ ಸಿಲುಕಿ ಜೀವನ್ಮರಣ ಸ್ಥಿತಿಯಲ್ಲಿ ಪರಿತಪಿಸುತ್ತಿದ್ದ ಅಸಂಖ್ಯಾತ ಜನರನ್ನು ಸತತವಾಗಿ ಜೀವದ ಹಂಗು ತೊರೆದು, ರಕ್ಷಿಸಿ ಮೆಚ್ಚುಗೆಗೆ ಪಾತ್ರರಾದರು. ಕಣ್ಮುಂದೆಯೇ ಕುಸಿಯುತ್ತಿದ್ದ ಗುಡ್ಡ, ಬೆಟ್ಟ, ಭಾರಿ ಸೆಳೆತದಿಂದ ಆಪತ್ತಿನಲ್ಲಿ ಹರಿಯುತ್ತಿದ್ದ ನದಿಗಳನ್ನು ದಾಟಿ ಪ್ರವಾಹ ಸಂತ್ರಸ್ತರನ್ನು ಸಾವಿರಾರು ನಿಸ್ವಾರ್ಥಿ ಸ್ವಯಂಸೇವಕರು ಜೊತೆಗೂಡಿ ಕಾಪಾಡಿದರು. ಸ್ಥಳೀಯ ಸೇವಕರು ಮಾತ್ರವಲ್ಲದೆ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಬೆಂಗಳೂರು, ಮಂಡ್ಯ, ಹಾಸನ ಅಲ್ಲದೇ ರಾಜ್ಯದ ಇತರ ಭಾಗಗಳಿಂದ ಸ್ವಯಂಸೇವಕರು ಸಂತ್ರಸ್ತರ ನೆರವಿಗೆ ಧಾವಿಸಿದ್ದರು.

### #SOS ಕೇರಳ ಮತ್ತು #SOS ಕೊಡಗು ವಾರ್ ರೂಮ್

#SOS ಕೇರಳ ಮತ್ತು #SOS ಕೊಡಗು ವಾರ್ ರೂಮ್ ನೆರೆ ಸಂತ್ರಸ್ತರನ್ನು ಬದುಕಿಸಲು ಸ್ವಯಂಸೇವಕರಿಂದ ದೇಶದಲ್ಲೇ ಮೊದಲಿಗೆ ವಿನೂತನ ಪ್ರಯೋಗ.

**#SOS ಕೇರಳ ಮತ್ತು #SOS ಕೊಡಗು ವಾರ್ ರೂಮ್ ಕಾರ್ಯದ ಒಟ್ಟು ಸಾರಾಂಶ**

- **ಬಳಸಿದ ಹ್ಯಾಶ್ ಟ್ಯಾಗ್ : #SOSKerala & #SOSKodagu**
- **ವಾರ್ ರೂಮಿನ ಸದಸ್ಯರು: 32**
- **ಮನುಷ್ಯ ಶ್ರಮ ಗಂಟೆಗಳು (ಮ್ಯಾನ್ ಹವರ್ಸ್): 1200 ಗಂಟೆಗಳು**
- **ಒಟ್ಟು ಮಾಡಿದ ಕರೆಗಳು : 1050 ಕರೆಗಳು**
- **ಖುದ್ದು ಸಹಾಯದ ಸೇವೆಗಳು : 95 ನೆರೆ ಸಂತ್ರಸ್ತ ಸನ್ನಿವೇಶಗಳು**
- **ಸಾಮಾಜಿಕ ಜಾಲತಾಣದಲ್ಲಿ ಸಂದೇಶಗಳು : ಅಂದಾಜು 3200**
- **ಸಂತ್ರಸ್ತರ ಪರಿಹಾರ ನಿಧಿ ಸಂಗ್ರಹಣೆ : 3 ರಿಂದ 4 ಲಕ್ಷ ಬೆಲೆಬಾಳುವಷ್ಟು.**
- **ಅಂತರ್ಜಾಲ ಉಪಯೋಗಿಸಿ ಪರಿಹಾರ ನಿಧಿ ಸಂಗ್ರಹಣಾ ಕೇಂದ್ರಗಳು : 2**
- **ಸುಲಭದಲ್ಲಿ ಆನ್ ಲೈನ್ ದಾನ ಮಾಡುವ ಕ್ರೌಡ್ ಫಂಡಿಂಗ್ ಸೌಲಭ್ಯ: ಚಾಲ್ತಿಯಲ್ಲಿದೆ.**

ಒಂದು ಕಡೆ ಸಂಘದ ಸ್ವಯಂಸೇವಕರು ತಳಮಟ್ಟದಲ್ಲಿ ಜನರನ್ನು ರಕ್ಷಿಸುತ್ತಿದ್ದರೆ, ಇನ್ನೊಂದೆಡೆ ಮಾಹಿತಿ ತಂತ್ರಜ್ಞಾನ ನುರಿತ ಸ್ವಯಂಸೇವಕರ ತಂಡ ಭಾರತದ ಹಲವು ರಾಜ್ಯಗಳಿಂದ ಮತ್ತು ಸಾಗರದಾಚೆಯಿಂದ ಸ್ವಯಂ ಪ್ರೇರಣೆಯಿಂದ “ವಾರ್ ರೂಮ್”ನಡಿ ಒಂದಾಗಿ ಕೊಡಗು ಮತ್ತು ಕೇರಳದ ನೆರೆ ಸಂತ್ರಸ್ತರ ಜೀವವನ್ನು ಸಂರಕ್ಷಿಸಿದ ರೋಮಾಂಚಕ ಕಥೆಯ ಒಂದಷ್ಟು ಮಾಹಿತಿ ನಿಮಗಾಗಿ.

ಆತಂಕದ SOS ಅಥವಾ ಜೀವ ಕರೆಗಳು ಸಾಮಾಜಿಕ ಜಾಲತಾಣದಲ್ಲಿ ಯಾವುದೇ ಕ್ರಮವಿಲ್ಲದೆ ಹರಿದಾಡಿ ಸಂದೇಶಗಳ ಪ್ರವಾಹವನ್ನೇ ಸೃಷ್ಟಿಸಿತು. ಅಪಾಯದ ಸೂಚನೆಯನ್ನು ಅರಿತ, 32 ಸ್ವಯಂಸೇವಕರು 30 ನಿಮಿಷಗಳಲ್ಲಿ ಆನ್ ಲೈನ್ ಒಟ್ಟಾಗಿ ಶೀಘ್ರ ಸಂವಹನಕ್ಕಾಗಿ ವಾಟ್ಸಾಪ್ ಗ್ರೂಪಿನ ಸಹಾಯದಿಂದ #SOSKerala ಮತ್ತು #SOSKodagu ಎಂಬ ಹ್ಯಾಶ್ ಟ್ಯಾಗ್‌ಯಿಗಳನ್ನು ಪ್ರಾರಂಭಿಸಿದರು. ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್ ಟ್ವಿಟ್ಟರ್ ಮತ್ತು ವಾಟ್ಸಾಪ್‌ಗಳನ್ನು ಜಾಲಾಡಿದ ತಂಡ, ಎಲ್ಲಾ ಆತಂಕ (SOS) ಕರೆಗಳನ್ನು ಹ್ಯಾಶ್ ಟ್ಯಾಗ್ ನಡಿಯಲ್ಲಿ ಕ್ರೋಡೀಕರಿಸಿತು. ಒಟ್ಟು 95 ಸನ್ನಿವೇಶದಲ್ಲಿ ಭಯಭೀತರಾದ ಜನರನ್ನು ರಕ್ಷಿಸಲಾಯಿತು. ಅದರಲ್ಲಿ ನೀರು ತುಂಬಿದ ಮನೆಯ ಛಾವಣಿಯ ಮೇಲೆ ನಿಂತ ವಯಸ್ಸಾದ ಮಹಿಳೆ ಹಾಗೂ ಕುಸಿಯುತ್ತಿರುವ ಗುಡ್ಡದ ಹತ್ತಿರ ಜೀವವನ್ನು ಕೈಯಲ್ಲಿಹಿಡಿದು ಸಹಾಯಕ್ಕಾಗಿ ನಿರೀಕ್ಷಿಸುತ್ತಿದ್ದ ಜನರನ್ನು ಕಾಪಾಡಿದ ಉದಾಹರಣೆಗಳಿವೆ. ಈ ಸ್ವಯಂಸೇವಕರು ಆತಂಕದಲ್ಲಿದ್ದ ಜನರ ಮಾಹಿತಿಯನ್ನು ನಕ್ಷೆಯಲ್ಲಿ ಸಂಗ್ರಹಿಸಿ ತಳಮಟ್ಟದಲ್ಲಿ ಸೇವಾನಿರತ ಸ್ವಯಂಸೇವಕರಿಗೆ ಅದನ್ನು ಒದಗಿಸುವುದರ ಮೂಲಕ ಸಂತ್ರಸ್ತರು ಮತ್ತು ಸೇವಕರ ಮಧ್ಯೆ ಸಂಪರ್ಕ ಕೊಂಡಿಯಾಗಿ ಜನರ ಪ್ರಾಣವುಳಿಸಿದರು.

ಮೂಲದಲ್ಲಿ ಕ್ಷಿಪ್ರ ಗತಿಯ ರಕ್ಷಣಾ ಕಾರ್ಯವನ್ನು ಸಂಘದ ಸ್ವಯಂಸೇವಕರೇ ಮಾಡುತ್ತಿದ್ದರು, ಇವರನ್ನು ಸಂಪರ್ಕಿಸುವ "ವಾರ್ ರೂಮ್" ಎಂಬ ನೂತನ ಕಲ್ಪನೆಗೆ ನಾಂದಿ ಹಾಡಿದ್ದು ಸ್ವತಃ ನಿಸ್ವಾರ್ಥಿ ದೇಶಭಕ್ತ ಸೇವಕರು, ಮಾತೆಯರ ತಂಡ ಹಾಗೂ ನಮ್ಮ ಸಾಮಾಜಿಕ ಜಾಲತಾಣದ ಹಲವು ಮುಂದಾಳುಗಳು. ಮೇಲಿನ ತಂಡದಲ್ಲಿ ಕೆಲವು ಸ್ವಯಂಸೇವಕರು ಸಕ್ರಿಯವಾಗಿ ಪಾಲ್ಗೊಂಡಿದ್ದರು.

**ಇದು ಸಂಘದ ಸೇವಾ ವೃತ್ತಿಯ ಒಂದು ಉದಾಹರಣೆ. ರಾಷ್ಟ್ರೀಯ ಸಂಘದ ಸ್ಥಾಪನೆಯ ನಂತರ ಸಮಾಜದಲ್ಲಿ ಜರುಗಿದ ದುರಂತ ಕ್ಷಣಗಳಲ್ಲಿ ಸಂಘ ದೇಶಕ್ಕೆ ಭುಜಬಲವನ್ನು ನೀಡಿದೆ. ಅಂತಹ ಹಲವು ಸೇವಾ ಪಟ್ಟಿ ಕೆಳಕಂಡಂತಿದೆ:**

**ಭಾರತದ ಸ್ವಾತಂತ್ರ್ಯ ಸಂಗ್ರಾಮ:** ಸಾಮೂಹಿಕ ತರಗತಿಗಳ ಮೂಲಕ ಸ್ವಯಂ ಸೇವಕರಿಗೆ ಮತ್ತು ಸಾರ್ವಜನಿಕರಿಗೆ ಸ್ವಾತಂತ್ರ್ಯದ ಅಗತ್ಯ ಮತ್ತು ಪಡೆಯುವ ವಿಧಾನವನ್ನು, ಸ್ವರಕ್ಷಣೆ ಮತ್ತು ಹೋರಾಟದ ವಿಧಾನಗಳ ಬಗ್ಗೆ ಶಿಕ್ಷಣವನ್ನು ನೀಡಿತು.

**ಭಾರತದ ವಿಭಜನೆ:** ವಿಭಜನೆ ಬಿಸಿಯನ್ನು ಅನುಭವಿಸಿದ ಎಲ್ಲಾ ಧರ್ಮಗಳ ಲಕ್ಷಾಂತರ ಜನರನ್ನು ರಕ್ಷಿಸುವಲ್ಲಿ ಸಂಘದ ಪಾತ್ರ ಮಹತ್ವದ್ದು. ಈ ಕಾರ್ಯವನ್ನು ಮೆಚ್ಚಿದ ಭಾರತ ರತ್ನ ಭಗವಾನ್ ದಾಸ್‌ಯಿರು ಸ್ವಯಂಸೇವಕರನ್ನು "Highly Spirited and self Sacrifying Boys " ಎಂಬ ಬಿರುದನ್ನೂ ನೀಡಿದರು.

**ಚೀನಾ –ಭಾರತ ಯುದ್ಧ:** ಗಾಯಗೊಂಡ ಸಾವಿರಾರು ಸೈನಿಕರನ್ನು ಶಿಬಿರಗಳಿಗೆ ಸ್ಥಳಾಂತರಿಸಿ, ವೈದ್ಯಕೀಯ ಸೇವೆ ಒದಗಿಸುವುದರಲ್ಲಿ ನೆರವಾದರು. ಸಂಘದ ಕಾರ್ಯವನ್ನು ಶ್ಲಾಘಿಸಿ ಅಂದಿನ ಪ್ರಧಾನಿ ನೆಹರು ಸ್ವಯಂಸೇವಕರನ್ನು 1963 ರ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸುವಂತೆ ಆಹ್ವಾನಿಸಿದರು.

**ಪಾಕಿಸ್ತಾನ –ಭಾರತ ಯುದ್ಧ :** ಸೈನಿಕರ ಅಗತ್ಯತೆ ಕಂಡ ಶಾಸ್ತ್ರೀಜಿ ಸಂಘದ ಸ್ವಯಂಸೇವಕರನ್ನು ದೆಹಲಿ ಮತ್ತು ದೇಶದ ಹಲವು ಭಾಗಗಳಲ್ಲಿ ತಾತ್ಕಾಲಿಕ ಸಂಚಾರಿ ಪೊಲೀಸರಾಗಿ ಕಾರ್ಯನಿರ್ವಹಿಸುವಂತೆ ವಿನಂತಿಸಿಕೊಂಡರು. ಅದರಂತೆ ಸತತ 22 ದಿನಗಳ ಕಾಲ ಸ್ವಯಂಸೇವಕರು ದೇಶಸೇವೆ ಮೆರೆದರು.

**ಬಾಂಗ್ಲಾ ವಿಮೋಚನೆ:** ಕಾನೂನನ್ನು ಕಾಪಾಡಲು ಮತ್ತು ಅಗತ್ಯ ರಕ್ತ ದಾನಕ್ಕೆ ಮೊದಲು ಧುಮುಕಿದ್ದು ಸಂಘದ ಸ್ವಯಂಸೇವಕರು.

**ತುರ್ತು ಪರಿಸ್ಥಿತಿ :** ಇಂದಿರಾ ಗಾಂಧಿ ಸಂಘವನ್ನು ಬಹಿಷ್ಕರಿಸಿದ್ದರೂ, ಸಾವಿರಾರು ಸ್ವಯಂಸೇವಕರು ತಳಮಟ್ಟದಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವವನ್ನು ಪುನಃ ಸ್ಥಾಪಿಸುವಲ್ಲಿ ಯಶಸ್ವಿಯಾದರು.

1971 ಒಡಿಶಾ ಚಂಡಮಾರುತ, 1977 ಆಂಧ್ರ ಚಂಡಮಾರುತ, 1984 ಭೋಪಾಲ್ ಅನಿಲ ದುರಂತ, 2001 ಗುಜರಾತ್ ಭೂಕಂಪ, 2004 ರ ಬಂಗಾಳ ಕೊಲ್ಲಿಯ ಭೂಕಂಪ, 2006 ಸೂರತ್ ಪ್ರವಾಹ, 2013 ಉತ್ತರಖಾಂಡದ ಮೇಘಸ್ಫೋಟ, 2014 ರ ಕಾಶ್ಮೀರ ಪ್ರವಾಹ, ಹೀಗೆ ಬರೆದಷ್ಟು ಮುಗಿಯದು ಸಂಘದ ಸೇವಾ ಪ್ರವರ.

ಸಾಮಾನ್ಯ ಜನರಿಗೆ ಜಾತಿ, ಮತ, ಪಂಥ ಮತ್ತು ಧರ್ಮದ ಭೇದವನ್ನು ಮರೆತು ಪ್ರಕೃತಿ ವಿಕೋಪಗಳಲ್ಲಿ ಹಾಗೂ ಇತರೆ ತುರ್ತು ಸಂದರ್ಭಗಳಲ್ಲಿ ವಿಕೋಪ ಬಾಧಿತ ಹಳ್ಳಿಗಳನ್ನು ಪುನರ್ನಿರ್ಮಿಸುವಲ್ಲಿ, ಸಂತ್ರಸ್ತರ ಪುನರ್ವಸತಿ, ವೈದ್ಯಕೀಯ ಸಹಾಯ ಒದಗಿಸುವಲ್ಲಿ ರಾಷ್ಟ್ರಿಯ ಸ್ವಯಂಸೇವಕ ಸಂಘ ಅಂದು–ಇಂದು –ಎಂದೆಂದೂ ಒಂದು ಹೆಜ್ಜೆ ಮುಂದು. ಸ್ವಂತ ಸ್ವಾರ್ಥಗಳನ್ನು ಬದಿಗಿಟ್ಟು ದೇಶಸೇವೆಗೆ ಓಗೊಟ್ಟು ದೇಹವನ್ನು ದಂಡಿಸುವ ಸ್ವಯಂಸೇವಕರು ರಾಷ್ಟ್ರೀಯ ಸಂಘದಲ್ಲಿ ಹೊರತು ಪಡಿಸಿ ಬೇರೆಲ್ಲಿ ಸಿಗುತ್ತಾರೆ ಅಲ್ವಾ ?

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:**
**ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, #74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.